ಅಧ್ಯಾಯ 18

# ದೇವರು ಅಬ್ರಹಾಮನಿಗೆ ಭೇಟಿ ಕೊಟ್ಟಿದ್ದು

ಈ ಹಿಂದಿನ ಅಧ್ಯಾಯದಲ್ಲಿ, ದೇವರು ಅಬ್ರಹಾಮನಿಗೆ ಕಾಣಿಸಿಕೊಂಡನು. ಈ ಮಹತ್ವದ ಸಂಗತಿಗಳಿಂದ ಕೂಡಿದ ಭೇಟಿಯಲ್ಲಿ, ದೇವರು ಕಾನಾನ್‌ನ್ನು ವಾಗ್ದಾನ ದೇಶವೆಂದು ಗುರುತಿಸಿದನು (17:8), ಸುನ್ನತಿಯ ಒಡಂಬಡಿಕೆಯ ವಿವರಗಳನ್ನು ತಿಳಿಸಿದನು (17:9-14), ಅಬ್ರಹಾಮ ಮತ್ತು ಸಾರಳರ ಹೆಸರುಗಳನ್ನು ಬದಲಾಯಿಸಿದನು (17:5, 15). ಭವಿಷ್ಯದ ಸಂತತಿಯವರ ತಾಯಿಯಾಗಿರುವ ಸಾರಳು ಇಸಾಕ ಎಂಬ ಹೆಸರಿನ ಮಗನನ್ನು ಹಡೆಯುವವಳು ಎಂದು ಹೇಳಿದನು (17:16, 19); ಮತ್ತು ಆತನು ಇಸ್ಮಾಯೇಲನನ್ನು ಹನ್ನೆರಡು ಅರಸರಿಗೆ ಪಿತೃವನ್ನಾಗಿ ಮಾಡುವೆನು ಮತ್ತು ಆತನು ಒಂದು ದೊಡ್ಡ ಜನಾಂಗದ ಜನಕನಾಗುವನು ಎಂದು ವಾಗ್ದಾನ ಮಾಡಿದನು (17:20). ಇದಾದ ಬಳಿಕ, ಆತನು ಏಕಾಏಕಿ ದೃಷ್ಟಿಗೆ ಬೀಳದೆ ಮರೆಯಾದನು (17:22). 18ನೇ ಅಧ್ಯಾಯದಲ್ಲಿ, ಅಬ್ರಹಾಮನು ಯೆಹೋವನಿಂದ ಮತ್ತೊಂದು ಭೇಟಿಯನ್ನು ಅನುಭವಿಸುತ್ತಾನೆ.

## ಪರಲೋಕದಿಂದ ಬಂದ ಮೂವರು ಅಥಿತಿಗಳಿಗೆ ಅಬ್ರಹಾಮನ ಸತ್ಕಾರ (18:1-8)

1ಅಬ್ರಹಾಮನು ಮಧ್ಯಾಹ್ನದಲ್ಲಿ ಮಮ್ರೇತೋಪಿನ ತನ್ನ ಗುಡಾರದ ಬಾಗಲಲ್ಲಿ
ಕೂತಿರುವಾಗ ಯೆಹೋವನು ಅವನಿಗೆ ದರ್ಶನಕೊಟ್ಟನು. 2ಹೇಗಂದರೆ, ಅಬ್ರಹಾಮನು ಕಣ್ಣೆತ್ತಿ
ನೋಡಲು ಅವನ ಎದುರಿನಲ್ಲಿ ಯಾರೋ ಮೂರು ಮಂದಿ ಪುರುಷರು ನಿಂತಿದ್ದರು. ಕೂಡಲೆ
ಅವರನ್ನು ಎದುರುಗೊಳ್ಳುವದಕ್ಕೆ ಅವನು ಗುಡಾರದ ಬಾಗಲಿನಿಂದ ಓಡಿ ಹೋಗಿ 3ಬೊಗ್ಗಿ
ನಮಸ್ಕರಿಸಿ - ಸ್ವಾಮಿ, ದಯವಿರಲಿ; ದಾಸನ ಬಳಿಗೆ ದಯಮಾಡದೆ ಮುಂದೆ ಹೋಗಬೇಡಿರಿ.
ನೀವು ದಾಸನಿರುವ ಸ್ಥಳದ ಹತ್ತಿರ ಹಾದು ಹೋಗುತ್ತೀರಲ್ಲಾ. 4ನೀರು ತರಿಸಿಕೊಡುತ್ತೇನೆ; ನಿಮ್ಮ
ಕಾಲುಗಳನ್ನು ತೊಳೆದುಕೊಂಡು ಮರದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಿರಿ. 5ಸ್ವಲ್ಪ ಆಹಾರ
ತರುತ್ತೇನೆ, ಊಟವಾದ ಮೇಲೆ ನೀವು ಮುಂದಕ್ಕೆ ಪ್ರಯಾಣ ಬೆಳೆಸಬಹುದು ಎನ್ನಲು ಅವರು -
ನೀನು ಹೇಳಿದಂತೆ ಮಾಡಬಹುದು ಅಂದರು. 6ಆಗ ಅಬ್ರಹಾಮನು ಗುಡಾರದಲ್ಲಿದ್ದ ಸಾರಳ
ಬಳಿಗೆ ಓಡಿಹೋಗಿ ಆಕೆಗೆ - ಹಸನಾದ ಮೂರು ಸೇರು ಹಿಟ್ಟನ್ನು ನಾದಿ ಬೇಗ ರೊಟ್ಟಿಗಳನ್ನು
ಮಾಡು ಎಂದು ಹೇಳಿದನು. 7ಆಮೇಲೆ ಅವನು ದನಗಳ ಕಡೆಗೆ ಓಡಿಹೋಗಿ ಕೊಬ್ಬಿದ ಎಳೇ
ಕರುವನ್ನು ತೆಗೆದು ಆಳಿನ ಕೈಗೆ ಕೊಟ್ಟನು. ಆಳು ಬೇಗನೆ ಅಡಿಗೆ ಮಾಡಿದನು. 8ತರುವಾಯ
ಅಬ್ರಹಾಮನು ಹಾಲುಮೊಸರನ್ನೂ ಅಟ್ಟ ಮಾಂಸವನ್ನೂ ತೆಗೆದುಕೊಂಡು ಬಂದು ಆ

**ಮನುಷ್ಯರಿಗೆ ಬಡಿಸಿದನು. ಅವರು ಮರದ ಕೆಳಗೆ ಊಟಮಾಡುವವರೆಗೂ ಅವನು ಹತ್ತಿರ ನಿಂತುಕೊಂಡು ಉಪಚಾರ ಮಾಡಿದನು.**

**ವಚನ 1.** ಈಗ ಪುನಃ ಬಂದಾತನು **ಯೆಹೋವ** (יהוה, *ಯಾಹು)* ಅಥವಾ "ಕರ್ತನು" ಆಗಿದ್ದನು. ಈ ಸಾರಿ, ಮನುಷ್ಯರಂತೆ ಕಾಣಿಸುತ್ತಿದ್ದಂಥ ಪರಲೋಕದ ಮೂವರು ವ್ಯಕ್ತಿಗಳ ತಂಡದಲ್ಲಿ ಒಬ್ಬನಾಗಿ ಬಂದನು. ಖಂಡಿತವಾಗಿಯೂ, ಆ ಗುಂಪಿನ ವಕ್ತಾರನು ಯಾರೆಂಬುದನ್ನು ಅಬ್ರಹಾಮನು ಕಥೆಯಲ್ಲಿ ಕೊನೆಯ ತನಕವು ಗುರುತು ಹಿಡಿಯಲಿಲ್ಲ (18:10, 13, 14, 17, 20, 25-27, 30, 32, 33).

ವೃದ್ಧನಾಗ ಮೂಲಪಿತೃವು **ತನ್ನ ಗುಡಾರದ ಬಾಗಲಲ್ಲಿ ಕೂತಿದ್ದನು**. ಅಲೆಮಾರಿ ಗುಡಾರಗಳಿಗೆ ಮುಂದುಗಡೆಯಲ್ಲಿ ಇಳಿ ಬಿಟ್ಟಿರುವ ಪರದೆಗಳಂತೆ ಇರುತ್ತಿದ್ದವು, ಹಗಲಿನ ವೇಳೆ ಅವುಗಳನ್ನು ಮೇಲಕ್ಕೆ ಎತ್ತಿ ಅವುಗಳೊಳಗೆ ಗಾಳಿಯು ಬರುವಂತೆ ಬಿಟ್ಟಿರಲಾಗುತ್ತಿತ್ತು. ಗುಡಾರದ ಬಾಗಲಲ್ಲಿ ಅಬ್ರಹಾಮನು ನೆರಳನ್ನು ಮಾತ್ರವಲ್ಲದೆ ಗಾಳಿಯನ್ನು ಆನಂದಿಸುವದಕ್ಕೆ ಕೂತಿದ್ದನು.[1] ಅದರ ಜೊತೆಗೆ, ಆತನ ಗುಡಾರವು ಬಹುಶಃ **ಮಮ್ರೇತೋಪಿನ** ಮರವೊಂದರ ಕೆಳಗೆ ಹಾಕಲಾಗಿತ್ತೆಂದು ಕಾಣಿಸುತ್ತದೆ (13:18; 14:13). ಅತ್ಯಂಥ ಧಗೆಯಿಂದ ಕೂಡಿದ ಮದ್ಯಾಹ್ನದದಲ್ಲಿ ಸೂರ್ಯನ ಕಿರಣಗಳಿಂದ ಉಪಶಮನ ಪಡೆಯಲಿಚ್ಛಿಸಿ ತನ್ನ ಕಣ್ಣುಗಳನ್ನು ಹಾಗೆಯೇ ಮುಚ್ಚಿಕೊಂಡು ವಿಶ್ರಮಿಸಿಕೊಂಡು ಇದ್ದನು.

**ವಚನ 2.** ಏಕಾಏಕಿ, **ಅಬ್ರಹಾಮನು ಕಣ್ಣೆತ್ತಿ ನೋಡಲು ಅವನ ಎದುರಿನಲ್ಲಿ ... ಮೂರು ಮಂದಿ ಪುರುಷರು** ನಿಂತಿದ್ದನ್ನು ಕಂಡನು. ಆತನು ಅವರನ್ನು ಕಂಡ **ಕೂಡಲೆ ಅವರನ್ನು ಎದುರುಗೊಳ್ಳುವದಕ್ಕೆ ಅವನು ಗುಡಾರದ ಬಾಗಲಿನಿಂದ ಓಡಿ ಹೋದನು** ಮತ್ತು **ಬೊಗ್ಗಿ ನಮಸ್ಕರಿಸಿದನು**. "ಬೊಗ್ಗಿ" ಎಂಬುದಕ್ಕೆ ಬಳಸಲಾಗಿರುವ ಇಬ್ರಿಯ ಪದವು חָוָה *(ಚಾವಾಹ)*, ಇದು ಸಾಮಾನ್ಯವಾಗಿ ಹಳೆಯ ಒಡಂಬಡಿಕೆಯಲ್ಲಿ ದೇವರ (ಅಥವಾ ವಿಗ್ರಹಗಳ) ಆರಾಧನೆಯನ್ನು ಸೂಚಿಸುತ್ತದೆ (24:26; ವಿಮೋಚನಕಾಂಡ 20:5). ಹೇಗೂ, ಕೆಲವು ಪ್ರಕರಣಗಳಲ್ಲಿ, ಈ ಘಟನೆಯಲ್ಲಿ ಅಬ್ರಹಾಮನ ವಿಷಯದಲ್ಲಿ ಇರುವ ಹಾಗೆಯೇ, ಅದರರ್ಥವು "ಸಾಷ್ಟಾಂಗ ಬೀಳುವದು" ಎಂದಾಗಿದೆ, ಅದು ಬಂಧುಗಳು, ಅಪರಿಚಿತರು, ತಮಗಿಂತ ಉನ್ನರಯ, ಮತ್ತು ವಿಶೇಷವಾಗಿ ರಾಜವಂಶದವರ ಮುಂದೆ ತಮ್ಮನ್ನು ದೈನ್ಯಗೊಳಿಸಿಕೊಳ್ಳುವಿಕೆಯ ಒಂದು ಕೃತ್ಯವಾಗಿತ್ತು.[2] ಒಬ್ಬ ಆತಿಥ್ಯಗಾರನಾಗಿ, ಅಬ್ರಹಾಮನು ಈ ಅತಿಥಿಗಳು ಪರಲೋಕದ ಜೀವಿಗಳೆಂದು ತನಗೆ ಗೊತ್ತಾಗುವ ಮುನ್ನ ಅಪರಿಚಿತರಿಗೆ ಆದರದ ವಂದನೆಯನ್ನು ತಿಳಿಸುವ ಮೂಲಕ ಸವಿನಯ ಹಾಗೂ ಮರ್ಯಾದೆ ತೋರಿಸುವವನಾಗಿ ನಡೆದುಕೊಂಡಿದ್ದನು.

**ವಚನ 3.** ಅಬ್ರಹಾಮನ ಕೃತ್ಯವು ಪ್ರಾಚೀನ ಮಧ್ಯಪ್ರಾಚ್ಯದಲ್ಲಿದ್ದ, ವಿಶೇಷವಾಗಿ ಸಮಾಜಗಳ ಎಲ್ಲೆಗಳಲ್ಲಿ ವಾಸಿಸುತ್ತಿದ್ದ ಮತ್ತು ಭೇಟಿಯ ಅಥವಾ ಅತಿಥಿಗಳನ್ನು ಸತ್ಕರಿಸುವದಕ್ಕೆ ಹೆಚ್ಚು ಸದವಕಾಶವು ಸಿಕ್ಕದೆ ಇರುತ್ತಿದ್ದ ಜನರಲ್ಲಿರುತ್ತಿದ್ದ ಅತಿಥಿಸತ್ಕಾರಕ್ಕೆ ಒಂದು ದೃಷ್ಟಾಂತವಾಗಿರುತ್ತದೆ. ಅಷ್ಟೇ ಅಲ್ಲದೆ, ಆ ಸಂಸ್ಕೃತಿಯಲ್ಲಿ, ಆತಿಥ್ಯಗಾರನಿಗೆ ತನ್ನ ಅತಿಥಿಗಳ ಅಗತ್ಯತೆಗಳನ್ನು ಒದಗಿಸಿ ಕೊಟ್ಟು ಅವರು ಆತನ ಸಂಗಡ ಇರುವಷ್ಟು ಕಾಲ ಅವರ ಸುರಕ್ಷತೆಯನ್ನು ನೋಡಿಕೊಳ್ಳುವ ಹೊಣೆಗಾರಿಕೆಯು ಇರುತ್ತಿತ್ತು. ಆದದರಿಂದ, ಮೂಲಪಿತೃವು ನಾಯಕನನ್ನು, **ಸ್ವಾಮಿ** ಎಂದು ಕರೆದನು, ಅದು ಈ ಸನ್ನಿವೇಶದಲ್ಲಿ "ಅಯ್ಯಾ" ಎಂಬಂತಹ ಒಂದು ಸಭ್ಯತೆಯ ವಂದನೆ ಹೇಳುವಿಕೆಯಾಗಿತ್ತು.[3] ಆತನು ಅವರಿಗೆ ಮನವಿ ಮಾಡಿಕೊಳ್ಳುತ್ತಾ ಹೀಗೆ ಹೇಳಿದನು, **ದಯವಿರಲಿ; ದಾಸನ ಬಳಿಗೆ ದಯಮಾಡದೆ ಮುಂದೆ ಹೋಗಬೇಡಿರಿ.**

**ವಚನಗಳು 4, 5.** ಆ ಬಳಿಕ ಆತನು ಬಿಸಿಲಲ್ಲಿ ಪ್ರಯಾಣಿಸಿ ಬಹಳ ಬಳಲಿರುವಂಥ ಪ್ರತಿಯೊಬ್ಬ ಪ್ರಯಾಣಿಕನು ಯಾವಾಗಲೂ ಶ್ಲಾಘಿಸುವಂಥದ್ದನ್ನು ಅವರಿಗೆ ಕೊಡಲು ಮುಂದಾದನು: ಕುಡಿಯಲು ಮತ್ತು ಅವರ **ಕಾಲುಗಳನ್ನು ತೊಳೆದುಕೊಳ್ಳಲು ನೀರು** (ನೋಡಿರಿ 19:2; 24:32; 43:24; ನ್ಯಾಯಸ್ಥಾಪಕ 19:21; ಲೂಕ 7:44). ಆತನು ಅವರನ್ನು **ಮರದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಿರಿ** ಎಂದು ಆಮಂತ್ರಿಸಿದನು (ನೋಡಿರಿ 18:1), ಆ ವೇಳೆಯಲ್ಲಿ ಆತನು ಅವರಿಗೆ **ಸ್ವಲ್ಪ ಆಹಾರ** ತರುವದಕ್ಕೆ ಹೋದನು ("ಒಂದು ರೊಟ್ಟಿಯ ತುಂಡು"; NKJV). ಅಬ್ರಹಾಮನು ತನ್ನ ಅತಿಥಿಗಳಿಗೋಸ್ಕರ ಯಾವ ವಿಧವಾದ ಔತಣವನ್ನು ಮಾಡಿಸಿದನು ಎಂಬುದನ್ನು ಅರ್ಥಮಾಡಿಕೊಳ್ಳುವ ರೀತಿ ಇದಾಗಿರುತ್ತದೆ. ಅತಿಥಿಗಳನ್ನು ಸಂಕೋಚವಿಲ್ಲದವರಾಗಿ ಇರುವಂತೆ ಮಾಡಿ ತಾವು ಆತನಿಗೆ ಯಾವದೇ ಒತ್ತಾಯವನ್ನು ಹೇರುತ್ತಿಲ್ಲ ಎಂಬ ಭರವಸವನ್ನು ಅವರಿಗೆ ಕೊಡುವುದು ಇದರ ಉದ್ದೇಶವಾಗಿತ್ತು. ಇಲ್ಲವಾದರೆ, ಅವರು ಆತನ ಆಮಂತ್ರಣವನ್ನು ತಿರಸ್ಕರಿಸಬಹುದಿತ್ತು. ಅತಿಥಿಗಳು ಇದನ್ನು ಕೇಳಿಸಿಕೊಂಡಾಗ, **ನೀನು ಹೇಳಿದಂತೆ ಮಾಡಬಹುದು** ಎಂದು ಉತ್ತರಿಸಿದರು.

**ವಚನ 6.** ಅಬ್ರಹಾಮನಿಗೆ ವಯಸ್ಸಾಗಿ ಅಂತಹ ಮದ್ಯಾಹ್ನದ ಬಿಸಿಲಿನಲ್ಲಿಯೂ, ಆತನು ಅತಿಥಿಗಳು ಆದರಾತಿಥ್ಯಕ್ಕೊಳಪಟ್ಟವರು ಎಂದು ಭಾವಿಸಿಕೊಳ್ಳುವಂತೆ ಮತ್ತು ಅವರಿಗೆ ಬೇಕಾದದ್ದನ್ನೆಲ್ಲಾ ಒದಗಿಸುವದಕ್ಕೆ ಬಯಸಿದನು. ಆತನು **ಗುಡಾರದಲ್ಲಿದ್ದ ಸಾರಳ ಬಳಿಗೆ ಓಡಿಹೋದನು** ಮತ್ತು **ಹಸನಾದ ಮೂರು ಸೇರು** ["ಸೀಹಸ"; NIV] **ಹಿಟ್ಟನ್ನು ನಾದಿ ಬೇಗ ರೊಟ್ಟಿಗಳನ್ನು ಮಾಡು** ಎಂದು ಹೇಳಿದನು. ಒಂದು ಸೀಹಸ ಎಂದರೆ ಸುಮಾರು ಎರಡು ಗ್ಯಾಲನ್ (ಅಥವಾ ಎಂಟು ಲೀಟರಗಳು)[4] ಆಗಿತ್ತಾದ್ದರಿಂದ, ಮೂರು ಸೇರಿನಷ್ಟು ಹಿಟ್ಟು ಸಾಕಷ್ಟು ಮೊತ್ತದ ರೊಟ್ಟಿಗಳಾಗುತ್ತಿತ್ತು - ಅಬ್ರಹಾಮ, ಸಾರಳು, ಮತ್ತು ಮೂವರು ಅತಿಥಿಗಳು ತಿನ್ನುವದಕ್ಕೆ ಸಾಧ್ಯವಾಗುವಕ್ಕಿಂತಲೂ ಎಷ್ಟೋ ಅತ್ಯಧಿಕವಾಗಿರುತ್ತಿತ್ತು. ಈ ಕಥೆಯಲ್ಲಿ ಬೇರೆ ಯಾರನ್ನೂ ಪ್ರಸ್ತಾಪಿಸಿಲ್ಲವಾದರೂ, ಅಬ್ರಹಾಮನು ಅಪಾರವಾದ ಬಳಗವನ್ನು ಹೊಂದಿದ್ದನೆಂಬುದನ್ನು ನೆನಪಿಟ್ಟುಕೊಳ್ಳಬೇಕು (14:14). ಈ ಮನುಷ್ಯರ ಸಂಗಡ ಸೇರಿ ಬೇರೆ ಯಾರೊಬ್ಬರೂ ತಿನ್ನಲಿಲ್ಲವೆಂದಾದರೂ, ಆಹಾರವು ವ್ಯರ್ಥವಾಗುತ್ತಿರಲಿಲ್ಲ. "ಹಸನಾದ ಹಿಟ್ಟು" ಎಂಬುದು ಅತ್ಯಂಥ ಉನ್ನತ ಗುಣಮಟ್ಟದ ಹಿಟ್ಟನ್ನು ಸೂಚಿಸುತ್ತದೆ; ಅದನ್ನು ಬಹಳ ಸಣ್ಣದಾಗಿ ಹಿಟ್ಟು ಮಾಡಲಾಗಿರುತ್ತಿತ್ತು ಮತ್ತು ಗೋಧಿಯಿಂದ ಮಾಡಲಾಗಿರುತ್ತಿತ್ತು. ಬೇರೊಂದು ಕಡೆಯಲ್ಲಿ, ಅದು ಅಗ್ಗದಲ್ಲಿ ಸಿಕ್ಕುವ ಜವೆ ಗೋಧಿಗೆ ತದ್ವಿರುದ್ಧವಾಗಿ ನಿಲ್ಲುತ್ತದೆ (2 ಅರಸು 7:1, 16). ಧರ್ಮಶಾಸ್ತ್ರದಲ್ಲಿ, ದೇವರು ಅನೇಕ ಸಾರಿ ಯಜ್ಞಗಳಿಗೋಸ್ಕರ "ಹಸನಾದ ಹಿಟ್ಟು" ಅಗತ್ಯವೆಂದು ಹೇಳುತ್ತಿದ್ದನು (ವಿಮೋಚನಕಾಂಡ 29:2, 40; ಯಾಜಕಕಾಂಡ 2:1-7; 5:11; 6:15, 20).

**ವಚನಗಳು 7, 8.** ಕುರಿ ಅಥವಾ ಆಡು ಮರಿ ಆರಿಸಿಕೊಂಡಿದ್ದರೆ ಎಷ್ಟೋ ಸಾಕಾಗಿರುತ್ತಿತ್ತು (ನೋಡಿರಿ 2 ಸಮುವೇಲ 12:4; ಲೂಕ 15:27-30), ಆದರೆ ಆತನು **ದನಗಳ** ಹಿಂಡಿನೊಳಗಿಂದ ಒಂದು **ಕೊಬ್ಬಿದ ಎಳೇ ಕರುವನ್ನು** ಅರಿಸಿಕೊಳ್ಳುವುದು ಈ ಮೂವರು ಪರಿಚಿತವರಿಗೆ ಒಬ್ಬ ಅರಸನಿಗೆ ತಕ್ಕುದಾದ ಔದಾರ್ಯವನ್ನು ತೋರಿಸಿದಂತಾಗುತ್ತಿತ್ತು. ಆತನು ಈ ಔತಣವನ್ನು ಏರ್ಪಡಿಸುತ್ತಿರುವ ವೇಳೆ, ಬಹುಶಃ ಮೂಲಪಿತೃವಿಗೆ ಅನೇಕ ವರ್ಷಗಳ ಹಿಂದೆ "ಆಶೀರ್ವಾದನಿಧಿಯಾಗಿರುವಿ" ಎಂಬುದಾಗಿ ದೇವರು ಕೊಟ್ಟಿದ್ದ ಆದೇಶವನ್ನು ನೆನಪಿಸಿಕೊಂಡಿರಬಹುದು (12:2), ಹೀಗೆ ಆತನು ತನ್ನ ಅತಿಥಿಗಳಿಗೆ ತನ್ನಲ್ಲಿರುವ ಅತ್ಯುತ್ತಮವಾದದ್ದನ್ನು ಒದಗಿಸುವದಕ್ಕೆ ಇನ್ನಷ್ಟು ಹೆಚ್ಚು ಪ್ರಯತ್ನ ಪಟ್ಟನು. ಆತನ **ಆಳು**

ಮಾಂಸವನ್ನು ಸಿದ್ಧಪಡಿಸಿದ ಬಳಿಕ, ಅಬ್ರಹಾಮನು **ಹಾಲುಮೊಸರನ್ನೂ ಅಟ್ಟ ಮಾಂಸವನ್ನೂ ತೆಗೆದುಕೊಂಡು ಬಂದು** ಅವರಿಗೆ ಬಡಿಸಿದನು (ನೋಡಿರಿ ಧರ್ಮೋಪದೇಶಕಾಂಡ 32:14; ನ್ಯಾಯಸ್ಥಾಪಕ 5:25; 6:18, 19). ಬಳಿಕ **ಅವರು ಮರದ ಕೆಳಗೆ ಊಟಮಾಡುವವರೆಗೂ ಅವನು ಹತ್ತಿರ ನಿಂತುಕೊಂಡು ಉಪಚಾರ ಮಾಡಿದನು**.

## ಸಾರಳು, ಒಬ್ಬ ನಂಬಿಕೆಯಿಲ್ಲದ ಆತಿಥ್ಯಕಾರಿಣಿ (18:9-15)

**9ಬಳಿಕ ಅವರು ಅವನನ್ನು - ನಿನ್ನ ಪತ್ನಿಯಾದ ಸಾರಳು ಎಲ್ಲಿದ್ದಾಳೆ ಎಂದು ಕೇಳಲು ಅವನು - ಅಗೋ, ಗುಡಾರದಲ್ಲಿದ್ದಾಳೆ ಅಂದನು. 10ಅದಕ್ಕಾತನು - ಬರುವ ವರುಷದ ಇದೇ ಕಾಲದಲ್ಲಿ ನಾನು ತಪ್ಪದೆ ತಿರಿಗಿ ನಿನ್ನ ಬಳಿಗೆ ಬರುತ್ತೇನೆ; ಬಂದಾಗ ನಿನ್ನ ಪತ್ನಿಯಾದ ಸಾರಳಿಗೆ ಮಗನಿರುವನು ಅಂದನು. ಆ ಮಾತು ಹಿಂದೆ ಗುಡಾರದ ಬಾಗಲಲ್ಲಿ ನಿಂತಿದ್ದ ಸಾರಳ ಕಿವಿಗೆ ಬಿತ್ತು. 11ಅಬ್ರಹಾಮನೂ ಸಾರಳೂ ಬಹು ವೃದ್ಧರಾಗಿದ್ದರು; ಸಾರಳಿಗೆ ಮುಟ್ಟು ನಿಂತು ಹೋಗಿತ್ತು. ಹೀಗಿರಲಾಗಿ ಆಕೆ - 12ನನ್ನಂಥ ಮುದುಕಿಗೆ ಭೋಗವಾದೀತೇ? ನನ್ನ ಯಜಮಾನನೂ ಮುದುಕನಲ್ಲವೇ ಎಂದು ತನ್ನೊಳಗೆ ನಕ್ಕಳು. 13ಯೆಹೋವನು ಅಬ್ರಹಾಮನಿಗೆ - ಸಾರಳು ನಕ್ಕು ಮುದುಕಿಯಾದ ನಾನು ಮಗುವನ್ನು ಹೆರುವದಾದೀತೇ ಎಂದು ಹೇಳಿದ್ದೇನು? 14ಯೆಹೋವನಿಗೆ ಅಸಾಧ್ಯವಾದದ್ದುಂಟೋ? ನಾನು ಹೇಳಿದಂತೆಯೇ ಬರುವ ವರುಷದ ಇದೇ ಕಾಲದಲ್ಲಿ ನಾನು ನಿನ್ನ ಬಳಿಗೆ ಬಂದಾಗ ಸಾರಳಿಗೆ ಮಗನಿರುವನು ಎಂದು ಹೇಳಿದನು. 15ಆಗ ಸಾರಳು ಭಯಪಟ್ಟು - ನಾನು ನಗಲಿಲ್ಲ ಎಂದು ಬೊಂಕಲು ಆತನು - ಹಾಗನ್ನಬೇಡಮ್ಮಾ, ನೀನು ನಕ್ಕದ್ದುಂಟು ಅಂದನು.**

**ವಚನ 9.** ಸ್ಪಷ್ಟವಾಗಿರುವಂತೆ, ಅಬ್ರಹಾಮನಾಗಲಿ ಅಥವಾ ಸಾರಳಾಗಲಿ ಅತಿಥಿಗಳ ಸಂಗಡ ಕೂತುಕೊಂಡು ಊಟ ಮಾಡಲಿಲ್ಲ. ಅವರು ತಿನ್ನುತ್ತಿರುವ ವೇಳೆ ಮೂಲಪಿತೃವು ಅವರ ಬಳಿಯಲ್ಲಿ ನಿಂತುಕೊಂಡಿದ್ದನು, ಅವರಿಗೆ ಆತಿಥ್ಯಕಾರ ಮತ್ತು ಪರಚಾರಕ ಎರಡೂ ಆಗಿ ಸೇವೆ ಮಾಡಿದನು. ಮೂಲಪಿತೃವಿನ ಪದ್ಧತಿಯ ಅನುಸಾರವಾಗಿ, ಸಾರಳು ಸಮೀಪದಲ್ಲಿದ್ದಳು ಆದರೆ ಕಾಣಿಸದವಳಾಗಿ ಉಳಿದಿದ್ದಳು; ಸಾಮಾನ್ಯವಾಗಿ ಮಹಿಳೆಯರು ಪುರುಷ ಅತಿಥಿಗಳೊಂದಿಗೆ ಬೆರೆಯುತ್ತಿರಲಿಲ್ಲ.[5] ಆ ವ್ಯಕ್ತಿಗಳು ಹೀಗೆ ಹೇಳಿದರು, **ನಿನ್ನ ಪತ್ನಿಯಾದ ಸಾರಳು ಎಲ್ಲಿದ್ದಾಳೆ.** ಅವರ ಪ್ರಶ್ನೆಯು ಅಬ್ರಹಾಮನನ್ನು ತಬ್ಬಿಬ್ಬುಗೊಳಿಸಿರಬಹುದು. ಈ ಅಪರಿಚಿತರು ಆಕೆಯ ಹೆಸರನ್ನು ಹೇಗೆ ತಿಳಿದುಕೊಂಡರು? ಅಬ್ರಹಾಮನು ಸಾರಳನ್ನು ಅವರಿಗೆ ಪರಿಚಯಿಸಿದ್ದನು ಎಂಬುದಕ್ಕೆ ವಾಕ್ಯದಲ್ಲಿ ಯಾವದೇ ಸೂಚನೆ ಇರುವದಿಲ್ಲ. ಈ ಘಟನೆಯಿಂದಾಗಿ ಈ ಅತಿಥಿಗಳು ಸಾಮಾನ್ಯ ಮನುಷ್ಯರಿಗಿಂತಲೂ ಹೆಚ್ಚಿನವರಾಗಿರುವರೋ ಎಂಬುದಾಗಿ ಆತನು ಚಕಿತಗೊಳ್ಳುವದಕ್ಕೆ ಕಾರಣವಾಗಿತ್ತು. ಸಾರಳು ಎಲ್ಲಿದ್ದಾಳೆಂಬುದರ ಕುರಿತಾಗಿ, ಆತನು ಸಂಜ್ಞೆಯನ್ನು ಮಾಡಿ ಹೀಗೆ ಉತ್ತರಿಸಿದನು, **ಅಗೋ, ಗುಡಾರದಲ್ಲಿದ್ದಾಳೆ**.

**ವಚನ 10.** ಅವರೊಳಗೆ ಪ್ರಮುಖವಾಗಿ ಮಾತಾಡುವವನು 18:13ರಲ್ಲಿ "ಕರ್ತನು" (ಯೆಹೋವ) ಎಂದು ಗುರುತಿಸಲಾಗಿದ್ದು, ಬಳಿಕ ಆತನು ಹೀಗೆ ಹೇಳಿದನು: **ಬರುವ ವರುಷದ ಇದೇ ಕಾಲದಲ್ಲಿ ನಾನು ತಪ್ಪದೆ ತಿರಿಗಿ ನಿನ್ನ ಬಳಿಗೆ ಬರುತ್ತೇನೆ; ಬಂದಾಗ ನಿನ್ನ ಪತ್ನಿಯಾದ ಸಾರಳಿಗೆ ಮಗನಿರುವನು.** ಈ ಸಮಯಕ್ಕೆ ಮುಂಚೆ, ಒಬ್ಬ ಮಗನು ಹುಟ್ಟುವ ಕುರಿತಾಗಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಯಾವದೇ ನಿರ್ದಿಷ್ಟ ಕಾಲಾವಧಿಯನ್ನು ಹೊಂದಿರಲಿಲ್ಲ, ವಾಗ್ದಾನ ಮಾಡಲ್ಪಟ್ಟ ಬಾಧ್ಯಸ್ಥನು ಯಾವಾಗ ಬರುವನು ಎಂಬುದಕ್ಕೆ ಯಾವ

ಕಾಲಮಾನದ ಸುಳಿವು ಸಹ ಇರಲಿಲ್ಲ. ಈ ಪ್ರಕಟನೆಗಳಿಗೆ ತದ್ವಿರುದ್ಧವಾಗಿ, ಈ ಸಂದರ್ಭದಲ್ಲಿ ಕರ್ತನ ಪ್ರಕಟನೆಯು ನಿಖರವಾಗಿತ್ತು: "ಬರುವ ವರುಷ ಇದೇ ಕಾಲದಲ್ಲಿ" (כָּעֵת חַיָּה, *ಕಾ ಎಥ್ ಚಯ್ಯಾ.ಹ)*. 2 ಅರಸು 4:16, 17ರಲ್ಲಿ ಸಹ ಕಾಣಿಸಿಕೊಳ್ಳುವಂಥ ಈ ಪದಗುಚ್ಛವು, ವಸಂತಕಾಲವನ್ನು ಸೂಚಿಸುತ್ತದೆ, ಅದು "ಪುನರುಜ್ಜೀವಗೊಳಿಸುವ ಕಾಲ"[6] ಆಗಿರುತ್ತದೆ. ಒಂದು ವರ್ಷದೊಳಗೆ ಯೆಹೋವನು ಮೂಲಪಿತೃವಿನ ಬಳಿಗೆ ಹಿಂದಿರುಗಿ ಬರುವದಕ್ಕೂ ಸಾರಳು ಇಸಾಕನನ್ನು ಗರ್ಭಧರಿಸುವದಕ್ಕೆ ಏನು ಸಂಬಂಧ ಎಂಬುದನ್ನು ಪ್ರವಾದನೆಯು ವಿವರಿಸುವದಿಲ್ಲ, ಆದರೆ 21:1ನೇ ವಚನವು ಯೆಹೋವನು ಒಂದು ಮಗುವನ್ನು ಹಡೆಯುವಂತೆ ಆಕೆಗೆ ಸಹಾಯ ಮಾಡಿದನು ಎಂಬುದಾಗಿ ಹೇಳುತ್ತದೆ.

**ಹಿಂದೆ ಗುಡಾರದ ಬಾಗಲಲ್ಲಿ ನಿಂತಿದ್ದ ಸಾರಳ** ಕಿವಿಗೆ ಈ ಮಾತು ಬಿತ್ತು, ಮುಂದಿನ ವರ್ಷದ ವಸಂತಕಾಲದಲ್ಲಿ ಆಕೆಯು ಒಬ್ಬ ಮಗುವಿಗೆ ಜನ್ಮ ಕೊಡುವಳೆಂಬ ಪ್ರವಾದನಾ ಹೇಳಿಕೆಯನ್ನು ಕೇಳಿಸಿಕೊಂಡಳು. ಸ್ಪಷ್ಟವಾಗಿರುವ ಪ್ರಕಾರ, ಆ ದೈವಿಕ ವ್ಯಕ್ತಿಯು ಗುಡಾರಿಗೆ ಹಿಮ್ಮುಖವಾಗಿ ಕುಳಿತುಕೊಂಡಿದ್ದನು, ಆದ್ದರಿಂದ ಅವಳು ಪುರುಷರ ನಡುವಿನ ಸಂಭಾಷಣೆಯನ್ನು ಸೂರಿನ ಕೆಳಗೆ ನಿಂತು ಕದ್ದು ಆಲಿಸುತ್ತಿದ್ದಾಳೆಂಬುದು ಯಾರಿಗಾದರೂ ಗೊತ್ತಾಗುವುದೆಂದು ಭಾವಿಸಿಕೊಳ್ಳಲಿಲ್ಲ.

**ವಚನ 11.** ಇಲ್ಲಿ ಕಥನಕಾರನು **ಅಬ್ರಹಾಮನೂ ಸಾರಳೂ ಬಹು ವೃದ್ಧರಾಗಿದ್ದ**ರಿಂದ ಮಕ್ಕಳನ್ನು ಹಡೆಯುವುದು ಅವರಿಗೆ ಎಷ್ಟು ಅಸಾಧ್ಯವಾಗಿತ್ತೆಂಬುದನ್ನು ವಾಚಕರಿಗೆ ನೆನಪಿಸುವದಕ್ಕೆ ಮಧ್ಯದಲ್ಲಿ ಒಂದು ಮಾತನ್ನು ಸೇರ್ಪಡೆಗೊಳಿಸುತ್ತಾನೆ (ನೋಡಿರಿ 17:17). **ಸಾರಳಿಗೆ ಮುಟ್ಟು ನಿಂತು ಹೋಗಿತ್ತು**; ಅಂದರೆ, ಅವಳಿಗೆ ಮುಟ್ಟು ನಿಂತು ಮಕ್ಕಳನ್ನು ಹಡೆಯುವ ವಯಸ್ಸನ್ನು ಮೀರಿ ಹೋಗಿದ್ದಳು.

**ವಚನ 12.** ಈ ಕಾರಣಕ್ಕಾಗಿ, ಅಪನಂಬಿಕೆಯುಳ್ಳವಳಾಗಿ **ತನ್ನೊಳಗೆ ನಕ್ಕಳು**. ಹೇಗೂ, ಆಕೆಯ ಸಂದೇಹವಾದವು ಅವಳ ಗಂಡನದ್ದಕ್ಕಿಂತಲೂ ದೊಡ್ಡದಾಗಿರಲಿಲ್ಲ, ಅವರು ಈಗಲೂ ತಂದೆತಾಯಿಗಳಾಗಬಹುದೆಂಬುದನ್ನು ಕೇಳಿಸಿಕೊಂಡಾಗ ಆತನು ಅಡ್ಡ ಬಿದ್ದು ನಕ್ಕನು (17:17). ಸಾರಳು ತನ್ನೊಳಗೆ ಮಾತಾಡಿಕೊಂಡಳು, ನನ್ನಂಥ ಮುದುಕಿಗೆ ಭೋಗವಾದೀತೇ? **ನನ್ನ ಯಜಮಾನನೂ ಮುದುಕನಲ್ಲವೇ**. ಸಾರಳ ಪ್ರತ್ಯುತ್ತರವು ಅಬ್ರಹಾಮನಿಗಿಂತಲೂ ಹೆಚ್ಚು ಸಂಕೋಚದಿಂದ ಕೂಡಿತ್ತು, ಆದರೆ ತಾವಿಬ್ಬರೂ ಮಕ್ಕಳನ್ನು ಹಡೆಯುವದಕ್ಕಾಗದಷ್ಟು ಅತಿ "ವೃದ್ಧರು" ಎಂಬುದನ್ನು ಗ್ರಹಿಸಿಕೊಂಡಿದ್ದಳು. ಇಷ್ಟೊಂದು ವರ್ಷಗಳ ಕಹಿಯಾದ ನಿರಾಶೆಯು ಗತಿಸಿ ಹೋಗಿರುವಾಗ ಆಕೆಯು ಹೇಗೆ ಅಂಥ "ಭೋಗ"ವನ್ನು ಆಲೋಚನೆಗೆ ಅವಕಾಶವನ್ನು ಕೊಡಲು ಸಾಧ್ಯವಿತ್ತು?

**ವಚನ 13.** ಅಪರಿಚಿತ ಅತಿಥಿಯು ಅಬ್ರಹಾಮನ ಸಂಗಡ ಮಾತಾಡುವದನ್ನು ಸಾರಳು ಗುಟ್ಟಾಗಿ ಕೇಳಿಸಿಕೊಂಡಿದ್ದಳು, ಆದರೆ ಆಕೆಯು ನಗುವದನ್ನು ಆತನು ಕೇಳಿಸಿಕೊಂಡಾಗ ಪರಿಸ್ಥಿತಿಯ ಒಂದು ಹಿಮ್ಮೊಗವು ಸಂಭವಿಸಿತ್ತು. ಮಾತಾಡುವವನನ್ನು ಲೇಖಕನು **ಕರ್ತನು** (ಯೆಹೋವನು) ಎಂದು ಗುರುತಿಸುತ್ತಾನೆ, ಮತ್ತು ಆತನಿಗೆ ಹೇಗೆ ಸಾರಳ ಹೆಸರು ಗೊತ್ತಿತ್ತು ಮತ್ತು ಆಕೆಯು ತನ್ನೊಳಗೆ ಗೊಣಗಿಕೊಂಡದ್ದನ್ನು ಹೇಗೆ ಅರಿತುಕೊಂಡಿದ್ದನ್ನು ಎಂಬುದಕ್ಕೆ ಕಾರಣವನ್ನು ತಿಳಿಸುತ್ತದೆ; ಆಕೆಯು ತನಗಿರುವ ವಯಸ್ಸಿನಲ್ಲಿ **ಮಗುವನ್ನು ಹೆರುವುದಾದೀತೇ** ಎಂದು ಅಪನಂಬಿಕೆಯನ್ನು ಹೊಂದಿದ್ದಳು. ಆದದರಿಂದ, ಯೆಹೋವನು **ಅಬ್ರಹಾಮನಿಗೆ** ಪ್ರಶ್ನಿಸುತ್ತಾ ಹೀಗೆ ಕೇಳಿದನು, **ಸಾರಳು ನಕ್ಕು ... ಹೇಳಿದ್ದೇನು?**

**ವಚನ 14.** ಈ ಪ್ರಶ್ನೆಯ ಬಳಿಕ ದೇವರು ಮತ್ತೊಂದು ಪ್ರಶ್ನೆಯನ್ನು ಕೇಳಿದನು -

ಮೂಲಪಿತೃ ಮತ್ತು ಆತನ ಹೆಂಡತಿ ಇಷ್ಟು ವರ್ಷಗಳ ಎದುರಿಸಿದ್ದ ಮೂಲಭೂತವಾದ ಸಮಸ್ಯೆಯನ್ನು ಅದು ಗುರುತಿಸಿದ್ದಾಗಿತ್ತು (15:1–18:15): **ಯೆಹೋವನಿಗೆ ಅಸಾಧ್ಯವಾದದ್ದುಂಟೋ?** ಖಂಡಿತವಾಗಿಯೂ, ಇದೊಂದು ಭಾವೋತ್ತೇಜಕದ ಪ್ರಶ್ನೆಯಾಗಿತ್ತು ಮತ್ತು ಉತ್ತರವನ್ನು "ಇಲ್ಲ" ಎಂಬ ಉತ್ತರವನ್ನು ಬೇಡುವದಾಗಿತ್ತು. ಯೆಹೋವನಿಗೆ ಯಾವದೂ ಅಸಾಧ್ಯವೇ ಅಲ್ಲ (ಯೆರೆಮೀಯ 32:17; ಮತ್ತಾಯ 19:26; ಲೂಕ 1:37). ದೇವರು ಈಗಾಗಲೇ ತನ್ನನ್ನು "ಸರ್ವಶಕ್ತನು" ಎಂದು ಪ್ರಕಟಿಸಿಕೊಂಡಿದ್ದನು (17:1). ಯೆಹೋವನು ಅದ್ಭುತವಾಗಿ ಅವರ ಚೈತನ್ಯವನ್ನು ಪುನರುಜ್ಜೀವಿಸಿ, ಅವರ ವೃದ್ಧಾಪ್ಯದಲ್ಲಿಯೂ ಒಂದು ಮಗುವನ್ನು ಪಡೆಯುವಂತೆ ಅವರನ್ನು ಶಕ್ತಗೊಳಿಸುವನು ಎಂಬುದನ್ನು ನಂಬಬೇಕೆಂದು ಅಬ್ರಹಾಮ ಮತ್ತು ಸಾರಳರಿಗೆ ಕರೆ ಕೊಡುತ್ತಾನೆ. ತರುವಾಯ ದೇವರು ಈ ಮುಂಚೆ ಪ್ರಕಟಗೊಳಿಸಿದ್ದನ್ನು ಪುನರುಚ್ಛರಿಸಿದನು: **ನಾನು ಹೇಳಿದಂತೆಯೇ ಬರುವ ವರುಷದ ಇದೇ ಕಾಲದಲ್ಲಿ** ["ಪುನರುಜ್ಜೀವಿಸುವ ಕಾಲದಲ್ಲಿ," ವಸಂತಕಾಲದಲ್ಲಿ] **ನಾನು ನಿನ್ನ ಬಳಿಗೆ ಬಂದಾಗ ಸಾರಳಿಗೆ ಮಗನಿರುವನು ....**

**ವಚನ 15.** ಈ ಅತಿಥಿಯು ವಾಸ್ತವಿಕದಲ್ಲಿ ಮನುಷ್ಯ ರೂಪದಲ್ಲಿರುವ ದೇವರು ಎಂದು **ಸಾರಳು** ಈಗ ಗ್ರಹಿಸಿಕೊಂಡಿದ್ದಳು, ಯಾಕೆಂದರೆ ಆಕೆಯು ಮನಸ್ಸಿನೊಳಗೆ ಅಂದುಕೊಂಡದ್ದನ್ನು ಹೇಳುವದಕ್ಕೆ ಯಾರಿಗೆ ಸಾಧ್ಯ? ಚಕಿತಗೊಳ್ಳುವದರ ಜೊತೆಗೆ, ಆಕೆಯು **ಭಯಪಟ್ಟ**ವಳಾಗಿದ್ದಳು ಮತ್ತು ತನ್ನ ಒಳಗಿದ್ದ ಅಪನಂಬಿಕೆಯ ಯೋಚನೆಗಳು ಬಯಲಿಗೇಳೆಯಲ್ಪಟ್ಟಿದ್ದಕ್ಕೆ ಮುಜುಗರವನ್ನು ಅನುಭವಿಸಿದ್ದಳು. ಆದದರಿಂದ, **ನಾನು ನಗಲಿಲ್ಲ ಎಂದು** ಅದನ್ನು ನಿರಾಕರಿಸಿದಳು. ಆಕೆಯು ನುಡಿದ ಈ ಅಸತ್ಯವು ಆಕೆಯ ಗಂಡನು ತನ್ನ ಪ್ರಾಣಕ್ಕೆ ಹೆದರಿ ಫರೋಹನಿಗೆ ಹೇಳಿದ ಸುಳ್ಳಿನ ರೀತಿಯೇ ಆಗಿತ್ತು (12:10–20). ಆಕೆಯಲ್ಲಿನ ಅಪನಂಬಿಕೆಯ ಕುರಿತು ಯೆಹೋವನು ಅರಿತವನಾಗಿದ್ದಾನೆಂಬುದು ಆಕೆಯು ಗ್ರಹಿಸಿಕೊಂಡಾಗ, ಆತನಿಂದ ಬರಬಹುದಾದ ದಂಡನೆಯನ್ನು ನೆನದು ಭಯಪಟ್ಟಳು; ಆದರೆ ಆಕೆಯು ತಾನು ನಕ್ಕಿದ್ದಳು ಎಂಬುದನ್ನು ನಿರಾಕರಿಸುವ ಮೂಲಕ ತನ್ನ ಅಪರಾಧವನ್ನು ಮುಚ್ಚಿ ಹಾಕಿಕೊಂಡಳು.

ದೇವರು ಸಾರಳಿಗೆ ನೀಡಿದ ಪ್ರತ್ಯುತ್ತರವು ಅನಿರೀಕ್ಷಿತವಾಗಿತ್ತು. ಆಕೆಯು ದೈವಿಕ ಭಯವು ಹೇಗೆ ತೋರಿ ಬರುತ್ತದೆಂಬುದರ ಬಗ್ಗೆ ಹೆದರಿರಲಿಲ್ಲ. 17:17ರಲ್ಲಿ ಆಕೆಯ ಗಂಡನು ತೋರಿದ ಅಪನಂಬಿಕೆಯಿಂದಾಗಿ ಸಹ ದೈವಿಕ ಕೋಪವು ವ್ಯಕ್ತವಾಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಮೃತಪ್ರಾಯದವರಾಗಿರುವ ಇಬ್ಬರು ಸಂತಾನವನ್ನು ಪಡೆಯುವದಕ್ಕೆ ಸಂಬಂಧ ಪಟ್ಟಂತೆ, ಈಗಲೂ ತಮಗೆ ಮಗುವನ್ನು ಪಡೆಯುವದಕ್ಕೆ ಸಾಧ್ಯವೆಂಬುದನ್ನು ನಂಬುವುದು ಅತ್ಯಂಥ ಕಠಿಣವಾಗಿರುತ್ತದೆಂಬುದು ದೇವರಿಗೆ ಗೊತ್ತಿತ್ತು. ಆದದರಿಂದ, ಯೆಹೋವನು ಕಠೋರವಾದ ತೀರ್ಪು ಮಾಡುವಂತಹ ಮಾತುಗಳಿಂದ ಸಾರಳ ಹೃದಯದಲ್ಲಿ ಇನ್ನು ಹೆಚ್ಚಿಗೆ ಯಾವ ಕಳವಳವನ್ನೂ ಉಂಟು ಮಾಡಲಿಲ್ಲ. ಆತನು ದೃಢವಾದ ಆದಾಗ್ಯೂ ಕೃಪೆಯಿಂದ ಕೂಡಿದ ಉತ್ತರವನ್ನು ಆಕೆಗೆ ನೀಡಿದನು: **ಹಾಗನ್ನಬೇಡಮ್ಮಾ, ನೀನು ನಕ್ಕದ್ದುಂಟು.**

ಅಬ್ರಹಾಮ ಮತ್ತು ಸಾರಳರ ಅತಿಥಿಗಳು ಅವರಿಗೆ ಶುಭವರ್ತಮಾನವನ್ನು ತಂದಿದ್ದರು. ಅನೇಕ ವರ್ಷಗಳ ಕಾಲ ಕಾದುಕೊಂಡಿದ್ದ ಬಳಿಕ, ಈಗ ಅವರಿಗೆ ದೇವರ ವಾಗ್ದಾನವು ನೆರವೇರುವ ಕುರಿತಾದ ಒಂದು ಕಾಲದ ಚೌಕಟ್ಟು ಸಿಕ್ಕಿತ್ತು. ಅತಿಥಿಗಳು ಹೊರಟು ಹೋಗುವದಕ್ಕೆ ಮುನ್ನ, ಅಬ್ರಹಾಮನಿಗೆ ಅವರು ಒಂದು ಕೆಟ್ಟವಾರ್ತೆಯನ್ನು ಸಹ ತಿಳಿಸಿದರು:

ಆತನ ತಮ್ಮನ ಮಗನಾದ ಲೋಟನು ವಾಸಿಸುತ್ತಿದ್ದ ಪಟ್ಟಣಗಳಾದ ಸೊದೋಮ್ ಗೊಮೋರಗಳು ಬಹಳ ಕೆಟ್ಟವುಗಳಾಗಿದ್ದ ಸ್ವಲ್ಪ ಕಾಲದಲ್ಲಿಯೇ ದೈವಿಕ ಕ್ರಮವು ಜರುಗಿಸಲ್ಪಡಲಿತ್ತು.

## ಕರ್ತನು ಮತ್ತು ಇಬ್ಬರು ದೇವದೂತರ ನಡುವಿನ ಸಂಭಾಷಣೆ (18:16-22)

**16ಆ ಮನುಷ್ಯರು ಅಲ್ಲಿಂದ ಹೊರಟು ಸೊದೋಮಿನ ಕಡೆಗೆ ನೋಡಿದರು; ಅಬ್ರಹಾಮನು
ಅವರನ್ನು ಸಾಗಕಳುಹಿಸುತ್ತಾ ಅವರ ಜೊತೆಯಲ್ಲೇ ಬಂದಿದ್ದನು. 17ಆಗ ಯೆಹೋವನು
ತನ್ನೊಳಗೆ - ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು
ಸರಿಯೋ? 18ಅವನಿಂದ ಬಲಿಷ್ಠವಾದ ಮಹಾಜನಾಂಗವು ಹುಟ್ಟಬೇಕಲ್ಲಾ; ಅವನ ಮೂಲಕ
ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದ ಉಂಟಾಗುವದಲ್ಲಾ; 19ಅವನು ತನ್ನ
ಪುತ್ರಪೌತ್ರರಿಗೆ - ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು
ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ
ಮಾಡುವದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವದು ಅಂದುಕೊಂಡನು.
20ಇದಲ್ಲದೆ ಯೆಹೋವನು - ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ
ನನಗೆ ಮುಟ್ಟಿತು; ಆ ಊರಿನವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು;
21ನಾನು ಇಳಿದು ಹೋಗಿ ನನಗೆ ಮುಟ್ಟಿದ ಮೊರೆಯಂತೆಯೇ ಅವರು ಮಾಡಿದರೋ ಇಲ್ಲವೋ
ಎಂದು ನೋಡಿ ತಿಳುಕೊಳ್ಳುತ್ತೇನೆ ಅಂದನು. 22ಆ ಮನುಷ್ಯರು ಅಲ್ಲಿಂದ ಸೊದೋಮಿನ ಕಡೆಗೆ
ಹೋದರು; ಆದರೆ ಅಬ್ರಹಾಮನು ಯೆಹೋವನ ಎದುರಾಗಿ ಇನ್ನೂ ನಿಂತನು.**

**ವಚನ 16.** ಪರಲೋಕದಿಂದ ಬಂದ ಮೂವರು ಅತಿಥಿಗಳು, ಅಬ್ರಹಾಮ ಮತ್ತು ಸಾರಳರನ್ನು ಭೇಟಿ ಮಾಡುವ ಮೂಲಕ ತಮ್ಮ ಪ್ರಾಥಮಿಕ ಗುರಿಯನ್ನು ಸಾಧಿಸಿದ ಬಳಿಕ, ಅವರು ಈಗ ಮುಂದಕ್ಕೆ ಹೋಗಲು ಸಿದ್ಧರಾಗಿದ್ದರು. ಒಬ್ಬ ಉತ್ತಮ ಆತಿಥ್ಯಕಾರನಾಗಿ, ಮೂಲಪಿತೃವು ತನ್ನ ಅತಿಥಿಗಳ ಪ್ರಯಾಣ ಮಾರ್ಗದಲ್ಲಿ ಒಂದಿಷ್ಟು ದೂರದ ತನಕ ಜೊತೆಯಾಗಿ ಪ್ರಯಾಣಿಸಿ ಬಿಟ್ಟು ಬಂದನು. ಅವರು ಹೆಬ್ರೋನಿಗೆ ಪೂರ್ವ ದಿಕ್ಕಿನಲ್ಲಿರುವ ಪರ್ವತಗಳ ಕಡೆಗೆ ಸುಮಾರು ಮೂರು ಮೈಲಿಗಳಷ್ಟು ಪ್ರಯಾಣಿಸಿರಬಹುದಾಗಿದೆ, ಆ ಸ್ಥಳದಿಂದ ನೋಡುವಾಗ ಪೂರ್ವ ದಿಕ್ಕಿನ ದೂರದಲ್ಲಿ ಸುಮಾರು ಹದಿನೆಂಟು ಮೈಲಿಗಳಷ್ಟು ದೂರದಲ್ಲಿ ಮೃತ ಸಮುದ್ರವನ್ನು ಕಾಣಬಹುದಿತ್ತು. **ಆ ಮನುಷ್ಯರು ... ಸೊದೋಮಿನ ಕಡೆಗೆ ನೋಡಿದರು** ಎಂದು ದಾಖಲೆಯು ತಿಳಿಸುತ್ತದೆ.

ಪ್ರಾಚೀನ "ಸೊದೋಮ" ಇದ್ದಂಥ ಪ್ರಾಚೀನ ಸ್ಥಳವು ಯಾವದೆಂದು ನಿಖರವಾಗಿ ತಿಳಿದು ಬಂದಿರುವದಿಲ್ಲ, ಆದರೆ ಅದು ಮೃತ ಸಮುದ್ರದ ದಕ್ಷಿಣದ ತುದಿಯಲ್ಲಿತ್ತೆಂದು ಅನೇಕರು ಭಾವಿಸುತ್ತಾರೆ. ಮೃತ ಸಮುದ್ರದ ನೈಋತ್ಯ ಮತ್ತು ಆಗ್ನೇಯ ದಿಕ್ಕಿನಲ್ಲಿ ಭೂ ಉತ್ಖನನಗಳು ನಡೆದಿರುತ್ತವೆ, ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿಯೂ ನಡೆದಿರುತ್ತದೆ. ಕೆಲವು ಪಳೆಯುಳಿಕೆಗಳು ಕಂಡು ಹಿಡಿಯಲ್ಪಟ್ಟಿರುತ್ತವಾದರೂ, ಇವುಗಳಲ್ಲಿ ಯಾವದೇ ಪಟ್ಟಣಗಳು ಲೋಟನು ನೆಲೆಸಿದ್ದ ಬೈಬಲಿನಲ್ಲಿರುವ ಪಟ್ಟಣಗಳಾಗಿದ್ದಿರಬಹುದೋ ಎಂಬುದಕ್ಕೆ ಯಾವದೇ ಒಮ್ಮತವು ಮೂಡಿರುವದಿಲ್ಲ. ಸೊದೋಮ ಮತ್ತು ಗೊಮೋರಗಳ ಭಗ್ನಾವಶೇಷಗಳು ಮೃತ ಸಮುದ್ರದ ತಳದಲ್ಲಿರುತ್ತವೆಂದು, ಮರೆಯಾಗಿರುವ ಅದರ ವಿನ್ಯಾಸಗಳು ಉತ್ಖನನದ

ಸಲಿಕೆಯಿಂದ ಕಂಡುಹಿಡಿಯಲ್ಪಡುವದಕ್ಕಷ್ಟೆ ಕಾಯುತ್ತಿವೆ ಎಂದು ಇನ್ನು ಕೆಲವರು ನಂಬುತ್ತಾರೆ.[7]

**ವಚನ 17.** ಈ ದೃಶ್ಯದಲ್ಲಿ, **ಯೆಹೋವನು** ಅಬ್ರಹಾಮನ ಕುರಿತು ಮಾತಾಡಿದನು, ಆದರೆ ಆತನೊಂದಿಗೆ ಅಲ್ಲ. ದೇವರು ಮೌನವಾಗಿ ತನ್ನೊಂದಿಗೆ ಮಾತಾಡಿದನೋ ಅಥವಾ ಗಟ್ಟಿಯಾದ ಸ್ವರದಲ್ಲಿ ತನ್ನ ಜೊತೆಯಲ್ಲಿದ್ದ ದೇವದೂತರ ಸಂಗಡ ಮಾತಾಡಿದನೋ ಎಂಬುದನ್ನು ವಾಕ್ಯವು ತಿಳಿಸುವದಿಲ್ಲ; ಹೇಗೂ, ಎರಡನೆಯದ್ದು ಸಂವಹನದ ಪದ್ಧತಿಯಾಗಿರುವದಾದಲ್ಲಿ, ಮೊದಲು ಆತನು ಅಬ್ರಹಾಮನಿಗೆ ತನ್ನ ಮಾತುಗಳು ಕೇಳಿಸದಂಥ ರೀತಿಯಲ್ಲಿ ಮಾತಾಡಿದ್ದನು ಎಂದಾಗುತ್ತದೆ.

ಇಲ್ಲಿ ದೇವರ ಪ್ರಶ್ನೆಯು ಏನಾಗಿತ್ತೆಂದರೆ **ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ?** ಬೈಬಲಿನ ಅನಂತರದಲ್ಲಿ ಇತಿಹಾಸದಲ್ಲಿ, ಈ ಪ್ರಶ್ನೆಯು ಪುನಃ ಉದ್ಭವವಾಗುತ್ತದೆ, ಆದರೆ ಅದೊಂದು ಪ್ರಶ್ನೆ ಎಂಬುದಕ್ಕಿಂತಲೂ ಒಂದು ದೃಢವಾದ ಹೇಳಿಕೆಯಾಗಿ ಬರುತ್ತದೆ. ಆಮೋಸನ ಮೂಲಕವಾಗಿ, ಯೆಹೋವನು ಹೀಗೆ ಪ್ರಕಟಗೊಳಿಸಿದನು, "ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು" (ಆಮೋಸ 3:7). ಇದು ಸೂಚಿಸುವದೇನೆಂದರೆ ದೇವರು ಅಬ್ರಹಾಮನ ಸಂಗಡ (ಆತನು 20:7ರಲ್ಲಿ ಒಬ್ಬ "ಪ್ರವಾದಿ" ಎಂದು ಕರೆಯಲ್ಪಟ್ಟಿದ್ದಾನೆ), ಮಾತ್ರವಲ್ಲದೆ ಮುಂದಿನ ಪ್ರವಾದನಾತ್ಮಕ ಉತ್ತರಾಧಿಕಾರಿಗಳ ಸಂಗಡ, ತಾನು ಲೋಕದಲ್ಲಿ ಏನು ಮಾಡಲಿದ್ದಾನೆಂಬುದನ್ನು ಹಂಚಿಕೊಂಡನು.

**ವಚನ 18.** ಯೆಹೋವನು ತನ್ನ ಯೋಜನೆಯನ್ನು **ಅಬ್ರಹಾಮನಿಗೆ** ತಿಳಿಸುವದಕ್ಕೆ ಮೊದಲನೆಯ ಕಾರಣವೆಂದರೆ ಆತನ ಗಮ್ಯತೆಯೇ ಆಗಿತ್ತು: ಆತನು **ಅವನಿಂದ ಬಲಿಷ್ಠವಾದ ಮಹಾಜನಾಂಗವು ಹುಟ್ಟಬೇಕಾಗಿತ್ತು**. ಈ ಹೇಳಿಕೆಯು 12:2; 13:16; 15:5; 17:4-6ರಲ್ಲಿನ ಹೇಳಿಕೆಗಳೊಂದಿಗೆ ಸಾಮ್ಯತೆಯನ್ನು ಹೊಂದಿದೆ; ಆದಾಗ್ಯೂ, "ಬಲಿಷ್ಠ" ಎಂಬುದು 12:2ರಲ್ಲಿನ ಮೂಲ ವಾಗ್ದಾನವನ್ನು ಇನ್ನಷ್ಟು ವಿಸ್ತರಿಸುವದಾಗಿದೆ. ಯೆಹೋವನು ಮೂಲಪಿತೃವಿಗೆ ಬಯಲುಗೊಳಿಸಿದ್ದಕ್ಕೆ ಎರಡನೆಯ ಕಾರಣವು ಏನೆಂದರೆ **ಅವನ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದ ಉಂಟಾಗುವ**ದಾಗಿತ್ತು. 14:13-24ರಲ್ಲಿ ಅಬ್ರಹಾಮನು ಹೇಗೆ ಕೆಲವರಿಗೆ ಆಶೀರ್ವಾದವಾದನು ಎಂಬುದನ್ನು ನೀಡಿದ್ದೇವೆ: ಸೊದೋಮಿನ ಅರಸ ಮತ್ತು ಆತನ ಜನರಿಗೆ; ಲೋಟ ಮತ್ತು ಆತನ ಕುಟುಂಬಕ್ಕೆ; ಅಮೋರಿಯದ ಮೂವರು ಸಹೋದರರು; ಮತ್ತು ಸಾಲೇಮಿನ ರಾಜನಾದ ಮೆಲ್ಕಿಜೆದೆಕ. ಪುನಃ 18:23-33ರಲ್ಲಿ, ಆತನು ಸೊದೋಮಿನಂತಹ ದುಷ್ಟ ಪಟ್ಟಣದಲ್ಲಿ ಜೀವಿಸುವವರಿಗೆ ಒಂದು ಆಶೀರ್ವಾದವಾಗಿ ಕಾರ್ಯಮಾಡಲಿದ್ದನು. ಆತನು ಅವರ ಪರವಾಗಿ ಯೆಹೋವನಿಗೆ ವಿಜ್ಞಾಪನೆಯನ್ನು ಮಾಡುವ ಮೂಲಕವಾಗಿ ಈ ಕಾರ್ಯವನ್ನು ಮಾಡಲಿದ್ದನು.

**ವಚನ 19.** ಜನರು ಮತ್ತು ಜನಾಂಗಗಳ ಮೇಲೆ ಅಬ್ರಹಾಮನ ಪ್ರಭಾವವು ಏಕೆ ಅಷ್ಟೊಂದು ದೊಡ್ಡದು ಮತ್ತು ವಿಶ್ವವ್ಯಾಪಿಯಾಗಿರುತ್ತದೆ ಎಂಬುದನ್ನು ದೇವರು ತಿಳಿಸುತ್ತಾನೆ: **ಅವನನ್ನು ನಾನು ಆದುಕೊಂಡೆನಲ್ಲಾ.** ಇಬ್ರಿಯ ವಾಕ್ಯವು ಅಕ್ಷರಶಃ ಹೇಳುವದೇನೆಂದರೆ, "ನಾನು ಆತನನ್ನು ತಿಳಿದುಕೊಂಡಿದ್ದೇನೆ [יָדַע, *ಯಾಡಾ*]." ಯೆಹೋವನು ಮೂಲಪಿತೃವನ್ನು ಒಂದು ನಿಕಟವಾದ ರೀತಿಯಲ್ಲಿ ಬಲ್ಲವನಾಗಿದ್ದನು. *ಯಾಡಾ* ಎಂಬ ಪದದ ಮೂಲಭೂತ ಅರ್ಥವು ಒಂದು ಸಂಗತಿಯನ್ನು ಅಥವಾ ಒಬ್ಬ ವ್ಯಕ್ತಿಯನ್ನು "ತಿಳಿದುಕೊಂಡಿರು" ಎಂದಾಗಿದೆ, ಆ ಜ್ಞಾನವು ಎಷ್ಟೊಂದು ಮೂಲತತ್ವಗಳಿಂದ ಕೂಡಿದ್ದು ಅಥವಾ ಗಹನವಾದದ್ದಾಗಿದ್ದರೂ

ಸರಿಯೇ. ಆಳವಾದ ಅರ್ಥವು ವೈಯಕ್ತಿಕ ತಿಳುವಳಿಕೆಗೆ ಸಂಬಂಧಿಸಿದ್ದಾಗಿದೆ, ದೇವರು ಮತ್ತು ಆತನ ಜನರ ನಡುವಿನ ಸಂಬಂಧದಲ್ಲಿರುವಂತೆಯೇ ಅದಾಗಿರುತ್ತದೆ. ಜನರು ದೇವರ ಹೃದಯವನ್ನು ಮಾತ್ರವಲ್ಲದೆ ಆತನ ಧರ್ಮಶಾಸ್ತ್ರವನ್ನು ಅರಿತುಕೊಳ್ಳುವಾಗ ಅಂತಹ ಒಂದು ಸಂಬಂಧವು ಸಾಧ್ಯವಾಗುತ್ತದೆ (ಜ್ಞಾನೋಕ್ತಿ 2:5; ಯೆಶಾಯ 11:2; 58:2; ಯೆರೆಮೀಯ 22:16; ಹೋಶೇಯ 4:1, 6; 6:6). ಈ ಎರಡನೆಯ ವಿಧವಾದ ಬಳಕೆಯಲ್ಲಿ, *ಯಾಡಾ* ಎಂಬುದು ಗಂಡ ಮತ್ತು ಹೆಂಡತಿಯ ನಡುವಿನ ಆಪ್ತ ಸಂಬಂಧಕ್ಕೆ ಸಾದೃಶ್ಯವಾಗಿದೆ ಮತ್ತು ಈ ಕಾರಣದಿಂದ ಅದು ಆದಿಕಾಂಡ ಪುಸ್ತಕದಲ್ಲಿ ಲೈಂಗಿಕ ಸಂಬಂಧಗಳನ್ನು ಸೂಚಿಸುವದಕ್ಕೆ ಬಳಸುವ ಸೌಮ್ಯೋಕ್ತಿಯಾಗಿರುತ್ತದೆ (4:1, 17, 25; 19:8; 24:16; 38:26).

ಕೆಲವು ತರ್ಜುಮೆಗಳು (NASB; NIV; NRSV) *ಯಾಡಾ* ಎಂಬುದನ್ನು "ಆದುಕೊಳ್ಳಲ್ಪಟ್ಟ" ಎಂಬುದಾಗಿ ಈ ವಾಕ್ಯದೊಳಗೆ ಅನುವಾದಿಸುತ್ತವೆ, ಆದಾಗ್ಯೂ ಈ ತರ್ಜುಮೆಗಳು ಬದಿಯ ಟಿಪ್ಪಣಿಗಳಲ್ಲಿ ಈ ಪದದ ಅಕ್ಷರಶಃ ಅರ್ಥವು "ತಿಳಿದುಕೋ" ಎಂದು ಒಪ್ಪಿಕೊಳ್ಳುತ್ತವೆ. 19ನೇ ವಚನದಲ್ಲಿ "ಆದುಕೊಂಡೆನಲ್ಲಾ" ಎಂಬುದು *ಯಾಡಾ* ಎಂಬುದರ ಉತ್ತಮ ಅನುವಾದವಾಗಿರದೆ ಇರಬಹುದಾಗಿದೆ ಯಾಕೆಂದರೆ ದೇವರು ರಕ್ಷಣೆ ಹೊಂದಿಕೊಳ್ಳುವಂತೆ ವ್ಯಕ್ತಿಗಳನ್ನು ತನಗಿಷ್ಟ ಬಂದ ಹಾಗೆ ಶರತ್ತುರಹಿತವಾಗಿ ಆದುಕೊಳ್ಳುತ್ತಾನೆ (ಅಥವಾ ಆಯ್ಕೆ ಮಾಡುತ್ತಾನೆ) ಎಂದೂ, ಆದುಕೊಳ್ಳಲ್ಪಡದೆ ಇರುವವರು ಈ ವಿಷಯದಲ್ಲಿ ಯಾವ ಆಯ್ಕೆಯೂ ಇಲ್ಲದಂತೆ ನಿತ್ಯಕಾಲಕ್ಕೂ ದಂಡನೆಗೆ ಗುರಿಯಾಗುವರು ಎಂದೂ ಅರ್ಥ ಬರುವ ರೀತಿಯಲ್ಲಿ ಈ ಪದವನ್ನು ಅನೇಕ ಸಾರಿ ಅಪಾರ್ಥ ಮಾಡಿಕೊಳ್ಳಲಾಗಿರುತ್ತದೆ.[8] ಸ್ಪಷ್ಟವಾಗಿರುವಂತೆ, 18:19ರ ಚರ್ಚೆಯಾಂಶವು ಅಬ್ರಹಾಮನು ವೈಯಕ್ತಿಕ ರಕ್ಷಣೆ ಹೊಂದಿಕೊಳ್ಳುವಂತೆ ದೈವಿಕವಾಗಿ ಆದುಕೊಳ್ಳಲ್ಪಡುವಿಕೆಯೊಂದಿಗೆ (ಆಯ್ಕೆ ಮಾಡಿಕೊಳ್ಳಲ್ಪಟ್ಟದ್ದು) ಯಾವದೇ ಸಂಬಂಧವನ್ನು ಹೊಂದಿರುವದಿಲ್ಲ. ದೇವರು ಮೂಲಪಿತೃವನ್ನು ನಿಕಟವಾಗಿ ಬಲ್ಲವನಾಗಿದ್ದನು (*ಯಾಡಾ*) ಮತ್ತು ಆತನ ಸಂಗಡ ಒಂದು ವೈಯಕ್ತಿಕ ಸಂಬಂಧವನ್ನಿಟ್ಟುಕೊಂಡಿದ್ದನು, ತಾನು ಒಂದು ದೈವಿಕ ಧ್ಯೇಯ ಅಥವಾ ಗುರಿಯಿಟ್ಟುಕೊಂಡ ಕೆಲಸವನ್ನು ನೆರವೇರಿಸುವ ಇಂಗಿತವನ್ನು ಹೊಂದಿದ್ದನು.[9]

ಯೆಹೋವನು ಅಬ್ರಹಾಮನಿಗೆ ಇದ್ದ ಧ್ಯೇಯದ ಮೊದಲ ಭಾಗಕ್ಕಾಗಿ ತಳಪಾಯವನ್ನು ಸಿದ್ಧಗೊಳಿಸಿದ್ದನು. ಆತನು ಅಬ್ರಹಾಮನನ್ನು ಮತ್ತು ಸಾರಳನ್ನು ಆತನಿಂದ ಅಸಾಧ್ಯವಾದದ್ದು ಸಾಧ್ಯವಾಗುವುದೆಂಬ ನಂಬಿಕೆಯನ್ನು ಹೊಂದುವಂತೆ ನಡಿಸುತ್ತಿದ್ದಾನೆ. ಅಂದರೆ, ಅವರು ತಮ್ಮ ವೃದ್ಧಾಪ್ಯದಲ್ಲಿ ವಾಗ್ದಾನ ಮಾಡಲ್ಪಟ್ಟ ಮಗುವನ್ನು ಹಡೆಯುವರು. ಆರಂಭದಲ್ಲಿ, ಇವರಿಬ್ಬರೂ ತಮ್ಮ ನಂಬಿಕೆಯ ವಿಷಯದಲ್ಲಿ ಹೋರಾಟವನ್ನು ಅನುಭವಿಸಿದರು ಮತ್ತು ಅಂಥ ಅಭಿಪ್ರಾಯಗಳನ್ನು ಕೇಳಿದಾಗ ಅಪನಂಬಿಕೆಯಿಂದ ನಕ್ಕಿದ್ದರು; ಹೇಗೂ, ಅವರು ತಮ್ಮ ಸಂಶಯಗಳನ್ನು ಜಯಿಸುವಂತವರಾಗುವಂತೆ ದೇವರು ಅವರೊಂದಿಗೆ ಕೆಲಸವನ್ನು ಮುಂದುವರೆಸಿದ್ದನು. ಅಂತಿಮವಾಗಿ, ಅವರ ನಂಬಿಕೆಯು "ಅಪನಂಬಿಕೆಯಿಂದ ಚಂಚಲಚಿತ್ತ" ವಾಗಲಿಲ್ಲ ಎಂಬುದಾಗಿ ದಾಖಲೆಯು ನಮಗೆ ತಿಳಿಸುತ್ತದೆ (ರೋಮಾ 4:18-21); "ಯೆಹೋವನಿಗೆ ಅಸಾಧ್ಯವಾದದ್ದು" ಯಾವದೂ ಇಲ್ಲವೆಂಬುದಾಗಿ ಅವರು ನಂಬುವವರಾದರು (18:14).

ಅಬ್ರಹಾಮನಿಗಿದ್ದ ಧ್ಯೇಯದ ಎರಡನೆಯ ಭಾಗವು ಉಪದೇಶಕನಾಗಿ ಆತನಗಿರುವ ಕೆಲಸ ಸುತ್ತ ಕೇಂದ್ರಿಕೃತವಾಗಿತ್ತು. ಆತನು **ತನ್ನ ಪುತ್ರಪೌತ್ರರಿಗೆ ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸ**ಬೇಕಾದವನಾಗಿದ್ದನು

(ನೋಡಿರಿ ಯೆಶಾಯ 1:10-17; ಹೋಶೇಯ 6:4-6; ಆಮೋಸ 5:21-24; ಮೀಕ 6:6-8). ಇದು ನಮಗೆ ಆಶ್ಚರ್ಯಕರವಾಗಿರಕೂಡದು, ಯಾಕೆಂದರೆ ಮನೆಯು ಸಮಾಜದ ಅಸ್ತಿವಾರಕ ಸಂಸ್ಥೆಯಾಗಿರುತ್ತದೆ, ಅಲ್ಲದೆ ಅದು ಮೂಲಭೂತ ಶಿಕ್ಷಣದ ಸಂಸ್ಥೆ ಸಹ ಆಗಿರಬೇಕೆಂಬುದು ಯೆಹೋವನ ಇಂಗಿತವಾಗಿತ್ತು. ತಂದೆತಾಯಿಗಳು ದೇವರಿಂದ ಉಗಮವಾದ ಆತ್ಮೀಕ ಹಾಗೂ ನೈತಿಕ ಪರಂಪರೆಯನ್ನು ತಮ್ಮ ಮಕ್ಕಳಿಗೆ ಕಲಿಸಿ ಕೊಡತಕ್ಕದ್ದಾಗಿದೆ (ಧರ್ಮೋಪದೇಶಕಾಂಡ 6:1-9; ಎಫೆಸ 6:1-4). ಆದಾಗ್ಯೂ ಸುಳ್ಳು ದೇವರುಗಳ ಒಂದು ಅನ್ಯಧರ್ಮಿಯ ಜಗತ್ತಿನಲ್ಲಿ, ದೇವರು ಪ್ರಾಥಮಿಕವಾದ ಒತ್ತು "ಯೆಹೋವನಾಗಿ" ತನ್ನನ್ನೊಬ್ಬನನ್ನೇ ಆರಾಧಿಸಬೇಕು ಎಂಬುದಕ್ಕಿಂತಲೂ "ನ್ಯಾಯನೀತಿಗಳನ್ನು ನಡಿಸ" ಬೇಕು ಎಂಬುದೇ ಆಗಿತ್ತು. ಈ ಎರಡನೆಯ ಅಂಶವು ಇರುವದೆಂಬದಾಗಿ ದೇವರು ಮೊದಲೇ ಭಾವಿಸಿಕೊಂಡಿದ್ದನು, ಯಾಕೆಂದರೆ ಅಬ್ರಹಾಮನು ವಿಗ್ರಹಾರಾಧನೆಯನ್ನು ತೊರೆದು ಬಿಟ್ಟು ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಯೆಹೋವನೊಬ್ಬನನ್ನೇ ಸೇವಿಸುತ್ತಿದ್ದನಷ್ಟೆ.

ದೇವರ ಹೇಳಿಕೆಯ ಕೊನೆಯ ಪರಿಚ್ಛೇದವು ಅಬ್ರಹಾಮನಿಗೆ ಯೆಹೋವನು ಮಾಡಿದ ವಾಗ್ದಾನಗಳು ಶರತ್ತುಸಹಿತವಾಗಿದ್ದವು, ಇದು ಕೆಲವರು ಊಹಿಸಿಕೊಳ್ಳುವಂಥದಕ್ಕೆ ತದ್ವಿರುದ್ಧವಾಗಿದೆ. ಅವುಗಳು ಮೂಲಪಿತೃವಿನ ವಿಧೇಯತೆಯುಳ್ಳ ನಂಬಿಕೆಯ ಕಾರಣದಿಂದ ನೆರವೇರಿದ್ದವು. ಅಬ್ರಹಾಮನು "ಯೆಹೋವನ ಮಾರ್ಗವನ್ನು ಅನುಸರಿಸಿದನು" (ನೋಡಿರಿ 22:15-18; 26:5; ರೋಮಾ 4:16). **ಹೀಗೆ ಮಾಡುವದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವದಕ್ಕೆ** ಅಂತಹ ಪ್ರತಿಕ್ರಿಯೆಯು ಅತ್ಯಾವಶ್ಯಕವಾಗಿತ್ತು. ಭೂಲೋಕದ ಸಕಲ ಕುಟುಂಬಗಳನ್ನು ಆಶೀರ್ವದಿಸಬೇಕೆಂಬ (12:3) ಯೆಹೋವನ ಯೋಜನೆಯು ಅಬ್ರಹಾಮನೊಂದಿಗೆ ಆರಂಭಗೊಳ್ಳಬೇಕಿತ್ತು. ಪ್ರತಿಯಾಗಿ, ಆತನು ತನ್ನ ಕುಟುಂಬಕ್ಕೆ ದೇವರ ಚಿತ್ತವೇನೆಂಬುದನ್ನು ಕಲಿಸಿ ಕೊಡುವ ಅಗತ್ಯವಿತ್ತು. ಆತನ ಅನಂತರದ ಸಂತತಿಯವರು ಅದನ್ನು ತಮ್ಮ ಕುಟುಂಬಗಳಿಗೆ ಕಲಿಸಿ ಕೊಡಬೇಕಿತ್ತು; ಮತ್ತು ಅಂತಿಮವಾಗಿ ಅಬ್ರಹಾಮನ ಸಂತಾನ - ಇಸ್ರಾಯೇಲ್ಯರು - ಇಡೀ ಲೋಕಕ್ಕೆ ದೇವರ ಜ್ಞಾನವು ಪ್ರಸರಿಸಲ್ಪಡುವಂಥ ನಾಲೆ ಆಗಿತ್ತು (ವಿಮೋಚನಕಾಂಡ 19:4-6; ಯೆಶಾಯ 42:6; 49:6).

**ವಚನ 20. ಯೆಹೋವನು** ತನ್ನ ಪ್ರಶ್ನೆಗೆ ತಾನೇ ಉತ್ತರವನ್ನು ಕೊಡುತ್ತಾನೆ. ಆತನು ಈ ಮುಂಚೆ ಅಬ್ರಹಾಮನಿಗೆ ಕೇಳಿಸದಂಥ ರೀತಿಯಲ್ಲಿ ಮಾತಾಡಿದ್ದೇ ಆಗಿದ್ದಲ್ಲಿ, ಈಗ ಆತನು ಮೂಲಪಿತೃವಿಗೆ ಕೇಳಿಸಲ್ಪಡುವಷ್ಟು ಗಟ್ಟಿಯಾದ ಧ್ವನಿಯಲ್ಲಿ ಖಂಡಿತವಾಗಿಯೂ ಮಾತಾಡಿದ್ದನು. ಆತನು ಹೀಗೆ ಹೇಳಿದನು, **ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ ನನಗೆ ಮುಟ್ಟಿತು; ಆ ಊರಿನವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು.** "ಮೊರೆ" ಎಂಬುದು ಬಹುಶಃ ದುಷ್ಟ ದಬ್ಬಾಳಿಕೆಗಾರರ ಕೈಯಲ್ಲಿ ನಿಂದೆ ಮತ್ತು ಅನ್ಯಾಯಗಳನ್ನು ಅನುಭವಿಸಿದವರ ಗೋಳಾಟಗಳು ಮತ್ತು ಮನವಿಗಳು ಆಗಿದ್ದವೆಂದು ತೋರುತ್ತದೆ (ನೋಡಿರಿ ವಿಮೋಚನಕಾಂಡ 2:23; 3:7, 9; ಧರ್ಮೋಪದೇಶಕಾಂಡ 26:7; ನ್ಯಾಯಸ್ಥಾಪಕ 10:12; ನೆಹಮೀಯ 9:9; ಯೋಬ 34:28; ಕೀರ್ತನೆ 9:12; ಜ್ಞಾನೋಕ್ತಿ 21:13). ಅನಂತರ, ಪ್ರವಾದಿಗಳು ಇಸ್ರಾಯೇಲ್ ಮತ್ತು ಯೆಹೂದದ ಎರಡು ರಾಜ್ಯಗಳು ಮಾಡಿದ ಸಾಮಾಜಿಕ ಅನ್ಯಾಯಗಳನ್ನು ಪ್ರಾಚೀನ ಸೊದೋಮ್ ಮತ್ತು ಗೊಮೋರ ಪಟ್ಟಣಗಳ ಕೃತ್ಯಗಳಿಗೆ ಹೋಲಿಕೆ ಮಾಡಿದರು (ಯೆಶಾಯ 1:3, 4, 9, 10, 21-23; ಯೆಹೆಜ್ಕೇಲ 16:46-49; ಆಮೋಸ 4:1, 11). ಹೊಸ ಒಡಂಬಡಿಕೆಯಲ್ಲಿ, ಸೊದೋಮಿನ ಜನರು ಮಾಡುತ್ತಿದ್ದ ಪಾಪಗಳು ಹಾಗೂ ಅಪರಾಧಗಳ ವಿಷಯದಲ್ಲಿ ಲೋಟನು ಯೆಹೋವನಿಗೆ ಮೊರೆಯಿಟ್ಟನು

ಎಂಬುದರ ಕುರಿತು ಏನೂ ಹೇಳಲ್ಪಟ್ಟಿರುವದಿಲ್ಲ. ಹಾಗಿದ್ದರೂ, ಪೇತ್ರನು ಅವರ ಜೀವಿತಗಳು ಭಕ್ತಿಹೀನತೆ, ಕಾಮಾಸಕ್ತ ನಡವಳಿಕೆ, ಮತ್ತು ಅಧರ್ಮದ ಕೃತ್ಯಗಳಿಂದ ಕೂಡಿದ್ದರು ಎಂದು ಬಣ್ಣಿಸುತ್ತಾನೆ, ಮತ್ತು ಈ ಕೃತ್ಯಗಳು ನೀತಿವಂತನಾದ ಲೋಟನ ಆತ್ಮವನ್ನು ಅನುದಿನವೂ ವೇದನೆಪಡಿಸುತ್ತಿದ್ದವು ಎಂದು ಆತನು ಹೇಳಿದನು (2 ಪೇತ್ರ 2:6-8).

**ವಚನ 21.** "ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ" ಯನ್ನು ಕೇಳಿದವನಾಗಿ (18:20), ದೇವರು **ಇಳಿದು ಹೋಗಿ ನನಗೆ ಮುಟ್ಟಿದ ಮೊರೆಯಂತೆಯೇ ಅವರು ಮಾಡಿದರೋ ಎಂದು ನೋಡು**ತ್ತೇನೆ ಎಂಬುದಾಗಿ ನಿರ್ಧರಿಸಿಕೊಂಡನು (ನೋಡಿರಿ 4:10; 11:5, 7; 19:13). ಒಂದು **ಇಲ್ಲ**ವಾಗಿದ್ದರೆ, ಆ ವಿಷಯದ ಕುರಿತಾದ ಸತ್ಯವನ್ನು ಆತನು **ತಿಳುಕೊಳ್ಳು**ವವನಾಗಿದ್ದನು. ತಾನು ಸೊದೋಮ ಮತ್ತು ಗೊಮೋರ ಪಟ್ಟಣಗಳಲ್ಲಿನ ಪರಿಸ್ಥಿತಿಗಳ ಕುರಿತಾಗಿ ಮತ್ತೊಬ್ಬರು ಹೇಳಿದ್ದನ್ನು ಕೇಳಿಸಿಕೊಂಡ ಪುರಾವೆನ್ನಾಧರಿಸಿ ಅಥವಾ ಹೀಗಿರುವದೆಂದು ವಿವೇಚಿಸಿಕೊಂಡು ಅವಸರದಿಂದ ತೀರ್ಪು ಮಾಡುವವನಲ್ಲ ಎಂಬುದನ್ನು ಅಬ್ರಹಾಮನು ಅರ್ಥಮಾಡಿಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು. ಬದಲಾಗಿ, ತಾನೇ ಸ್ವತಃ ಸತ್ಯವನ್ನು ಕಂಡು ಹಿಡಿಯುವ ಕೆಲಸದ ಮೇಲೆ ಹೊರಟು ಇಡಲ್ಪಟ್ಟ ಮೊರೆಗಳಿಗೂ ಅಲ್ಲಿರುವ ಅಪರಾಧಗಳು ಮತ್ತು ದಬ್ಬಾಳಿಕೆಗೆ ಸಾಮ್ಯತೆಯಿರುತ್ತದೋ ಎಂಬುದನ್ನು ತನಿಖೆ ಮಾಡುವವನಾಗಿದ್ದನು. ಖಂಡಿತವಾಗಿಯೂ, ದೇವರು ಇಳಿದು ಹೋಗಿ ನೋಡುವನು ಎಂಬ ಹೇಳಿಕೆಯನ್ನು ಅಕ್ಷರಶಃ ಎಂದು ಭಾವಿಸಿಕೊಳ್ಳಕೂಡದು ಯಾಕೆಂದರೆ ಯೆಹೋವನು ಮನುಷ್ಯರಂತೆ ಸಮಯ ಮತ್ತು ಸ್ಥಳಗಳ ಮಿತಿಗೊಳಪಟ್ಟವನಲ್ಲ (ಕೀರ್ತನೆ 139:7-12). ಜನರು ಏನು ಮಾಡುತ್ತಿದ್ದಾರೆ ಮತ್ತು ಅವರು ಯಾವ ವಿಧವಾದ ಜೀವಿತಗಳನ್ನು ನಡಿಸುತ್ತಿದ್ದಾರೆ ಎಂಬುದನ್ನು ಆತನು ಎಲ್ಲಾ ಸಮಯಗಳಲ್ಲಿಯೂ ನೋಡುತ್ತಾನೆ ಮತ್ತು ಬಲ್ಲವನಾಗಿರುತ್ತಾನೆ (ಜ್ಞಾನೋಕ್ತಿ 15:3; ಯೆರೆಮೀಯ 23:24; ಇಬ್ರಿಯ 4:13).

**ವಚನ 22.** ಈ ಹಂತದಲ್ಲಿ **ಆ ಮನುಷ್ಯರು** [ದೇವದೂತರು] **ಅಲ್ಲಿಂದ ಸೊದೋಮಿನ ಕಡೆಗೆ** ತಿರುಗಿಕೊಂಡು ತಮ್ಮ ಪ್ರಯಾಣವನ್ನು ಮುಂದುವರೆಸಲು **ಹೋದರು; ಆದರೆ ಅಬ್ರಹಾಮನು ಯೆಹೋವನ ಎದುರಾಗಿ ಇನ್ನೂ ನಿಂತನು**. ಯೆಹೂದಿ ಸಂಪ್ರದಾಯದ ಪ್ರಕಾರವಾಗಿ, ಹಸ್ತಪ್ರತಿ ಲೇಖಕರಿಂದ ತಿದ್ದುಪಡಿ ಮಾಡಿದ ಹದಿನೆಂಟು ವಚನಗಳಲ್ಲಿ ಇದು ಒಂದಾಗಿದೆ ಯಾಕೆಂದರೆ ಇವುಗಳಲ್ಲಿನ ವಿಷಯವು ಅಮುಖ್ಯವಾದದ್ದೆಂದು ಪರಿಗಣಿಸಲಾಗಿತ್ತು. ವಚನದ ಎರಡನೆಯ ಭಾಗವು ಮೂಲತಃ ಈ ರೀತಿಯಿತ್ತೆಂದು ಸಂಪ್ರದಾಯವು ಹೇಳುತ್ತದೆ: "ಅದೇ ವೇಳೆಯಲ್ಲಿ *ಯೆಹೋವನು* ಇನ್ನೂ *ಅಬ್ರಹಾಮನ* ಮುಂದೆ ನಿಂತಿದ್ದನು" (ನೋಡಿರಿ NAB; NJB; TEV; NCV; CEV; NLT).[10] ಹೇಗೂ, ಈ ವಚನದಲ್ಲಿ ಯಾವದೇ ತಿದ್ದುಪಡಿಗಳನ್ನು ಮಾಡದೆಯೇ ಇರಬಹುದಾಗಿದೆ, ಯಾಕೆಂದರೆ MT ತರ್ಜುಮೆಯೊಳಗೆ 18:22 ಮತ್ತು 19:27 ಎರಡರಲ್ಲಿಯೂ ಒಂದೇ ವಿಧವಾದ ಹೇಳಿಕೆಯು ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಎರಡನೆಯ ವಾಕ್ಯಭಾಗವು ಹೇಳುವದೇನೆಂದರೆ "ಇತ್ತಲಾಗಿ ಅಬ್ರಹಾಮನು ಬೆಳಿಗ್ಗೆ ಎದ್ದು *ತಾನು ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದ* ಸ್ಥಳಕ್ಕೆ ತಿರಿಗಿ ಬಂದು" (ಒತ್ತಿ ಹೇಳಿದ್ದು ನನ್ನದು).

"ಸನ್ನಿಧಿಯಲ್ಲಿ ನಿಂತಿದ್ದನು" ಎಂಬ ಮಾತು ಹಳೆಯ ಒಡಂಬಡಿಕೆಯಲ್ಲಿ ಸರ್ವಸಾಧಾರಣವಾಗಿರುತ್ತದೆ. ದೇವರ "ಸನ್ನಿಧಿಯಲ್ಲಿ ನಿಂತು" ಕೊಳ್ಳುವುದು ಎಂದರೆ ಕೆಲವು ಸಾರಿ ಆತನನ್ನು ಆರಾಧಿಸುವುದು (ಯೆರೆಮೀಯ 7:10), ಆತನ ಸನ್ನಿಧಾನದಲ್ಲಿ ಪ್ರವೇಶಿಸುವುದು (ಧರ್ಮೋಪದೇಶಕಾಂಡ 19:17; 29:14, 15), ಅಥವಾ ಆತನನ್ನು ಸೇವಿಸುವುದು (1 ಅರಸು 17:1; 18:15; 2 ಅರಸು 3:14; 5:16) ಎಂದರ್ಥವಾಗಿರುತ್ತದೆ. ಇಲ್ಲಿ, ಈ

ಪದಗುಚ್ಛವು ಬೇರೆ ವಿಧದಲ್ಲಿ ಬಳಸಲ್ಪಟ್ಟಿರುತ್ತದೆ, ಇದು ಒಬ್ಬ ಪ್ರವಾದಿಯ ಪರಾರ್ಥ ವಿಜ್ಞಾಪನೆಯನ್ನು ಸೂಚಿಸುತ್ತದೆ.

ಅನೇಕ ವರ್ಷಗಳ ಬಳಿಕ, ಯೆಹೋವನು ಯೆರೆಮೀಯನಿಗೆ ಹೀಗೆ ಹೇಳಿದನು, "ಮೋಶೆಯೂ ಸಮುವೇಲನೂ ನನಗೆ ವಿಜ್ಞಾಪಿಸಿದರೂ ನನ್ನ ಮನಸ್ಸು ಈ ಜನರ ಕಡೆಗೆ ತಿರುಗದು" (ಯೆರೆ 15:1). ಅದಾದ ನಂತರ, ಅದೇ ಅಧ್ಯಾಯದಲ್ಲಿ, ಯೆರೆಮೀಯನು ಏಕಾಂಗಿಯಾಗಿ ಕೂತಿದ್ದನು; ದೇವರ ಜನರು ತಾನು ನೀಡಿದ ಸಂದೇಶವನ್ನು ತಿರಸ್ಕರಿಸಿದ್ದರು ಮತ್ತು ಆತನನ್ನು ಹಿಂಸೆ ಪಡಿಸಿದ್ದರೆಂಬ ಕಾರಣಕ್ಕಾಗಿ ಕೋಪಗೊಂಡಿದ್ದನು ಮತ್ತು ಖಿನ್ನತೆಗೊಳಗಾಗಿದ್ದನು. ಹತಾಶೆಗೊಂಡವನಾಗಿ, ಆತನು ಯೆಹೋವನ ವಿರುದ್ಧವಾಗಿ ವಾಗ್ದಾಳಿ ನಡಿಸಿದನು, ಆತನ ಮೇಲೆ ಸುಳ್ಳು ಆರೋಪವನ್ನು ಮಾಡುತ್ತಾ "ನೀನು ನನಗೆ ನೀರು ಬತ್ತುವ ಕಳ್ಳತೊರೆಯಂತಿರುವಿ" ಎಂದು ಹೇಳಿದನು (ಯೆರೆಮೀಯ 15:18), ಆದರೆ ವಾಸ್ತವಿಕದಲ್ಲಿ, ದೇವರು ಪ್ರವಾದಿಯನ್ನು ವಂಚಿಸಿರಲಿಲ್ಲ. ನಿಜವೇನೆಂದರೆ, ಯೆಹೋವನು ಆತನನ್ನು ತನಗೆ ವಕ್ತಾರನಾಗಿರುವಂತೆ ಕರೆದ ವೇಳೆ, ಜನಾಂಗದ ನಾಯಕರು ಮತ್ತು ಜನರು ಅವನ ಬೋಧನೆಯನ್ನು ತಿರಸ್ಕರಿಸುವರು ಮತ್ತು ಅವನ ವಿರುದ್ಧ ಕಾದಾಡುವರು ಎಂಬುದಾಗಿ ಯೆಹೋವನು ಆತನಿಗೆ ನೇರವಾಗಿ ತಿಳಿಸಿದ್ದನು. ಅಂತಹ ವಿರೋಧವು ಇದ್ದಾಗ್ಯೂ, ದೇವರು ತನ್ನ ಸೇವಕನಿಗೆ ಹೀಗೆ ವಾಗ್ದಾನ ಮಾಡಿದನು: "ನಿನ್ನನ್ನು ಉದ್ಧರಿಸಿ ರಕ್ಷಿಸಲು ನಾನೇ ನಿನ್ನೊಂದಿಗಿರುವೆನು" (ಯೆರೆಮೀಯ 1:8, 17-19), ಮತ್ತು ಆತನನ್ನು ನಿಜಕ್ಕೂ ದೇವರು ಬಿಕ್ಕಟ್ಟಿನಿಂದ ಬಿಡಿಸಿ ತಪ್ಪಿಸಿದನು. ಆದದರಿಂದ, ಯೆಹೋವನು ಯೆರೆಮೀಯನಿಗೆ ಹೀಗೆ ಬುದ್ಧಿವಾದ ಹೇಳಿದನು, "ನೀನು [ನನ್ನ ಕಡೆಗೆ] ಹಿಂದಿರುಗಿದರೆ ನನ್ನ ಸಮ್ಮುಖದಲ್ಲಿ ನಿಲ್ಲುವಂತೆ ನಾನು ನಿನ್ನನ್ನು ತಿರುಗಿ ಸೇರಿಸಿಕೊಳ್ಳುವೆನು" (ಯೆರೆಮೀಯ 15:19). ಸರಳವಾಗಿ ಹೇಳುವದಾದರೆ, ಆತನು ಯೆಹೋವನ ಮೇಲೆ ಹೊರಿಸಿದ್ದ ಕಠೋರ ಆರೋಪಗಳ ವಿಷಯದಲ್ಲಿ ಪಶ್ಚಾತ್ತಾಪ ಪಡುವದಾದರೆ, ಆತನು ತನ್ನ ಪ್ರವಾದನಾ ಸೇವೆಯನ್ನು ಮುಂದುವರೆಸಬಹುದಾಗಿತ್ತು ಹಾಗೂ ದೇವರ ದಾರಿ ತಪ್ಪಿರುವ ಜನರಿಗೋಸ್ಕರ ವಿಜ್ಞಾಪನೆಯನ್ನು ಮಾಡಬಹುದಿತ್ತು.

18:22ರಲ್ಲಿ ಅಬ್ರಹಾಮನು "ಯೆಹೋವನ ಸನ್ನಿಧಿಯಲ್ಲಿ ನಿಂತುಕೊಂಡಿದ್ದು" ಯೆಹೂದ ರಾಜ್ಯದ ಮುಕ್ತಾಯದ ಕಾಲಾವಧಿಯ ವೇಳೆಯಲ್ಲಿನ ಪ್ರವಾದನಾತ್ಮಕ ಸೇವೆಯನ್ನು ಹೋಲುವಂಥದ್ದಾಗಿತ್ತು. ಅದು ಪರಾರ್ಥ ಪ್ರಾರ್ಥನೆ ಸ್ವಭಾವದ್ದಾಗಿತ್ತು, ಆದರೆ ಯೆರೆಮೀಯನು ದೇವರ ವಿರುದ್ಧ ಮಾಡಿದ ಬದ್ಧ ದ್ವೇಷ, ಗುಣಗುಟ್ಟುವಿಕೆ, ಮತ್ತು ಸುಳ್ಳು ಆರೋಪಗಳ ಮಾತುಗಳನ್ನು ಇದು ಹೊಂದಿರಲಿಲ್ಲ. ಆದರೂ, ಈ ಇಬ್ಬರಿಗೂ ಕಷ್ಟಕರ ಸಮಯಗಳಲ್ಲಿ ಯೆಹೋವನು ನೀತಿ ಮತ್ತು ನ್ಯಾಯಗಳನ್ನು ಮಾಡುವನೆಂಬ ಭರವಸ ಕೊಡಲ್ಪಡುವುದು ಅಗತ್ಯವಿದೆ. ಯೆರೆಮೀಯನು ಹಿಂಸೆ ಮತ್ತು ತಿರಸ್ಕಾರಗಳನ್ನು ಅನುಭವಿಸುವಂತೆ ಯೆಹೋವನು ಅನುಮತಿಸಿದನು, ಅಬ್ರಹಾಮನಿಗಾದರೋ ಸೊದೋಮ ಗೊಮೋರ ಪಟ್ಟಣಗಳ ಮೇಲೆ ಬರಲಿರುವ ನಾಶನದಲ್ಲಿ ಲೋಟ ಮತ್ತು ಆತನ ಕುಟುಂಬವು ಹೊಡೆದುಕೊಂಡು ಹೋಗಲ್ಪಡುವದೆನೋ ಎಂಬ ಕಳಕಳಿಯು ಇತ್ತು.

## ಸೊದೋಮ ಮತ್ತು ಗೊಮೋರಗಳಿಗಾಗಿ ಅಬ್ರಹಾಮನು ವಿಜ್ಞಾಪನೆಯನ್ನು ಮಾಡಿದ್ದು (18:23-33)

**23ಆಗ ಅಬ್ರಹಾಮನು ಹತ್ತಿರಕ್ಕೆ ಬಂದು - ನೀನು ದುಷ್ಟರ ಸಂಗಡ ನೀತಿವಂತರನ್ನೂ**

ನಾಶಮಾಡುವಿಯಾ? 24ಒಂದು ವೇಳೆ ಆ ಊರೊಳಗೆ ಐವತ್ತು ಮಂದಿ ನೀತಿವಂತರಿದ್ದಾರು;
ಅದರಲ್ಲಿ ಐವತ್ತು ಮಂದಿ ನೀತಿವಂತರಿದ್ದರೂ ಆ ಸ್ಥಳವನ್ನು ಉಳಿಸದೆ ನಾಶಮಾಡುವಿಯಾ?25ಆ
ರೀತಿಯಾಗಿ ದುಷ್ಟರಿಗೂ ಶಿಷ್ಟರಿಗೂ ಭೇದಮಾಡದೆ ದುಷ್ಟರ ಸಂಗಡ ನೀತಿವಂತರನ್ನೂ
ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದು; ಸರ್ವಲೋಕಕ್ಕೆ ನ್ಯಾಯತೀರಿಸುವವನು
ನ್ಯಾಯವನ್ನೇ ನಡಿಸುವನಲ್ಲವೇ ಎಂದು ಹೇಳಲು ಯೆಹೋವನು - 26ಸೊದೋಮಿನಲ್ಲಿ ಐವತ್ತು
ಮಂದಿ ನೀತಿವಂತರು ನನಗೆ ಸಿಕ್ಕಿದರೆ ಅವರ ನಿಮಿತ್ತ ಊರನ್ನೆಲ್ಲಾ ಉಳಿಸುವೆನು ಅಂದನು.
27ಅದಕ್ಕೆ ಅಬ್ರಹಾಮನು - ಇಗೋ, ಮಣ್ಣೂ ಬೂದಿಯೂ ಆಗಿರುವ ನಾನು ಸ್ವಾಮಿಯ ಸಂಗಡ
ವಾದಿಸುವದಕ್ಕೆ ಧೈರ್ಯಗೊಂಡಿದ್ದೇನೆ; 28ಒಂದು ವೇಳೆ ಐವತ್ತು ಮಂದಿ ನೀತಿವಂತರಿಗೆ ಐದು
ಮಂದಿ ಕಡಿಮೆಯಾಗಿದ್ದಾರು; ಐದು ಮಂದಿ ಕಡಿಮೆಯಾದದ್ದಕ್ಕೆ ಪಟ್ಟಣವನ್ನೆಲ್ಲಾ
ನಾಶಮಾಡುವಿಯಾ ಎಂದು ಹೇಳಲು ಯೆಹೋವನು - ಅಲ್ಲಿ ನಾಲ್ವತ್ತೈದು ಮಂದಿ ಸಿಕ್ಕಿದರೆ
ಅದನ್ನು ನಾಶಮಾಡುವದಿಲ್ಲ ಅಂದನು. 29ಅಬ್ರಹಾಮನು ಆತನ ಸಂಗಡ ಇನ್ನೂ ಮಾತಾಡಿ -
ಒಂದು ವೇಳೆ ಅಲ್ಲಿ ನಾಲ್ವತ್ತು ಮಂದಿ ಸಿಕ್ಕಾರು ಎನ್ನಲು ಆತನು - ನಾಲ್ವತ್ತು ಮಂದಿ ಸಿಕ್ಕಿದರೆ ಆ
ಪಟ್ಟಣವನ್ನು ನಾಶಮಾಡುವದಿಲ್ಲ ಅಂದನು. 30ಅಬ್ರಹಾಮನು - ಸ್ವಾಮೀ,
ಕೋಪಮಾಡಬಾರದು; ಇನ್ನೂ ಮಾತಾಡುತ್ತೇನೆ; ಒಂದು ವೇಳೆ ಮೂವತ್ತು ಮಂದಿ ಅಲ್ಲಿ
ಸಿಕ್ಕಾರು ಎನ್ನಲು ಆತನು - ಅಲ್ಲಿ ಮೂವತ್ತು ಮಂದಿ ಸಿಕ್ಕಿದರೆ ಅದನ್ನು ನಾಶಮಾಡುವದಿಲ್ಲ
ಅಂದನು. 31ಅವನು - ಇಗೋ, ಸ್ವಾಮಿಯ ಸಂಗಡ ಮಾತಾಡುವದಕ್ಕೆ ಧೈರ್ಯಗೊಂಡಿದ್ದೇನೆ;
ಒಂದು ವೇಳೆ ಇಪ್ಪತ್ತು ಮಂದಿ ಅಲ್ಲಿ ಸಿಕ್ಕಾರು ಎನ್ನಲು ಆತನು - ಇಪ್ಪತ್ತು ಮಂದಿಯಿದ್ದರೆ ಅವರ
ನಿಮಿತ್ತ ಅದನ್ನು ಉಳಿಸುವೆನು, ನಾಶಮಾಡುವದಿಲ್ಲ ಅಂದನು. 32ಅಬ್ರಹಾಮನು - ಸ್ವಾಮೀ,
ನಿನಗೆ ಸಿಟ್ಟಾಗಬಾರದು; ಇನ್ನು ಒಂದೇ ಸಾರಿ ಮಾತಾಡುತ್ತೇನೆ; ಒಂದು ವೇಳೆ ಹತ್ತು ಮಂದಿ
ಸಿಕ್ಕಾರು ಎನ್ನಲು ಆತನು - ಹತ್ತು ಮಂದಿಯ ನಿಮಿತ್ತವೂ ಅದನ್ನು ಉಳಿಸುವೆನು,
ನಾಶಮಾಡುವದಿಲ್ಲ ಅಂದನು. 33ಯೆಹೋವನು ಅಬ್ರಹಾಮನ ಸಂಗಡ ಮಾತಾಡುವದನ್ನು
ಮುಗಿಸಿ ಹೊರಟುಹೋದನು; ಅಬ್ರಹಾಮನು ತನ್ನ ಸ್ಥಳಕ್ಕೆ ಹಿಂದಿರುಗಿ ಹೋದನು.

**ವಚನಗಳು 23, 25.** ಮೋಶೆಯು **ಅಬ್ರಹಾಮ**ನ ವಿಷಯದಲ್ಲಿ ಆತನೊಬ್ಬ ಆದರ್ಶದ ಆತಿಥ್ಯಕಾರನೆಂದು ತಿಳಿಸಿದ್ದನು, ಆದರೆ ಲೋಟನು ಮತ್ತು ಆತನ ಕುಟುಂಬವು ಸೊದೋಮನ್ನು ತಮ್ಮ ನಿವಾಸವಾಗಿ ಮಾಡಿಕೊಂಡಿದ್ದ ಕಾರಣ ದುಷ್ಟ ಸೊದೋಮ ಪಟ್ಟಣದ ಪರವಾಗಿ ವಿಜ್ಞಾಪನೆಯನ್ನು ಮಾಡಿದ ಒಬ್ಬ ಕನಿಕರವುಳ್ಳ ಪ್ರವಾದಿ (ನೋಡಿರಿ 20:7) ಎಂಬುದಾಗಿ ಚಿತ್ರಿಸಿರುತ್ತಾನೆ. ದೇವರು ನ್ಯಾಯವನ್ನು ತಡೆ ಹಿಡಿಯಬೇಕೆಂದು ಮೂಲಪಿತೃವು ಸಲಹೆಯನ್ನು ನೀಡುತ್ತಿಲ್ಲ. ಅಲ್ಲದೆ ಅಬ್ರಹಾಮನು ಯೆಹೋವನ ನೀತಿಯನ್ನು ಕುರಿತು ಪ್ರಶ್ನೆಯನ್ನು ಸಹ ಎತ್ತುತ್ತಿಲ್ಲ. **ನೀನು ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವಿಯಾ?** (18:23) ಎಂಬ ಪ್ರಶ್ನೆಯು ಅಪರಾಧಿಗಳ ಸಂಗಡ ನಿರಪರಾಧಿಗಳನ್ನು ಸಹ ಯೆಹೋವನು ಸರ್ವನಾಶನಗೊಳಿಸುವನೋ ಎಂಬುದಾಗಿ ಅಬ್ರಹಾಮನಲ್ಲಿದ್ದ ಚಿಂತೆಯನ್ನು ವ್ಯಕ್ತಪಡಿಸುತ್ತದೆ. ಮೂಲಪಿತೃವಿನ ದೃಷ್ಟಿಯಲ್ಲಿ, ದೇವರು ನೀತಿವಂತರ (צַדִּיק, *ತ್ಸದ್ದಿಕ್*) ಮತ್ತು ದುಷ್ಟರ ನಡುವೆ ವ್ಯತ್ಯಾಸವನ್ನು ಮಾಡಬೇಕು, ನೀತಿವಂತರನ್ನು ಸಂರಕ್ಷಿಸಿ ದುಷ್ಟರಿಗೆ ದಂಡನೆ ಮಾಡಬೇಕು ಎಂದು ನಿಜವಾದ ನ್ಯಾಯವು ಕೇಳುವದಾಗಿದೆ. ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ವ್ಯತ್ಯಾಸವು ಬೈಬಲಿನಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುವ ಮುಖ್ಯ ಚರ್ಚೆಯಾಂಶವಾಗಿರುತ್ತದೆ, ಮತ್ತು ಯುಗಾಂತ್ಯದಲ್ಲಿ ಅಂತಿಮ ನ್ಯಾಯತೀರ್ಪಿನ ತಳಹದಿಯು ಇದೇ ಆಗಿರುತ್ತದೆ (ಪ್ರಕಟನೆ 20:11-15; 21:7, 8, 27; 22:11-15).

ಅಬ್ರಹಾಮನಿಗೆ ಬಹುಶಃ ಸೊದೋಮಿನ ಕೆಟ್ಟತನದ ಕುರಿತು ಈಗಾಗಲೇ ತಿಳಿದಿತ್ತೆಂದು ತೋರುತ್ತದೆ (13:13), ಯಾಕೆಂದರೆ ಅವರ ಪಾಪದ ಘೋರತೆಯ ಕುರಿತು ಯೆಹೋವನು ಮಾಡಿದ್ದ ಮೌಲ್ಯಮಾಪನಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಲು ಆತನು ಯಾವ ಪ್ರಯತ್ನವನ್ನೂ ಮಾಡಲೇ ಇಲ್ಲ. ಹೇಗೂ, ಆತನ ಮನಸ್ಸಿನಲ್ಲಿ ಎಲ್ಲಕ್ಕಿಂತಲೂ ಮುಖ್ಯವಾಗಿದ್ದದ್ದು ಅಲ್ಲಿ ವಾಸಿಸುತ್ತಿದ್ದ ಲೋಟ ಮತ್ತು ಆತನ ಕುಟುಂಬವೇ ಆಗಿತ್ತು. ಮೂಲಪಿತೃವಿನ ತಮ್ಮನ ಮಗನ ಕುರಿತಾಗಿ ನಮಗೆ ಈಗಾಗಲೇ ಗೊತ್ತಿರುವ ವಿಷಯದಿಂದ ಮತ್ತು 19ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿರುವ ವಿಷಯದಿಂದ ನೋಡುವದಾದರೆ, ಲೋಟನು ಅತ್ಯಂಥ ನೀತಿವಂತ ವ್ಯಕ್ತಿಗಳ ಒಂದು ಪಟ್ಟಿಯಲ್ಲಿ ಅತ್ಯಂಥ ಅಗ್ರ ಕ್ರಮಾಂಕವನ್ನು ಹೊಂದಿರಲಿಲ್ಲ ಎಂದು ಕಾಣಿಸುತ್ತದೆ. ಇನ್ನೊಂದು ಕಡೆಯಲ್ಲಿ, ಪೇತ್ರನು ಆತನನ್ನು ಪ್ರಾಚೀನ ಸೊದೋಮಿನಲ್ಲಿದ್ದ ದುಷ್ಟ ಜನರಿಗೆ ಹೋಲಿಕೆ ಮಾಡುವಾಗ ಈತನೊಬ್ಬ "ನೀತಿವಂತನು" (δίκαιος, *ಡಿಕಾಯಿಯೊಸ*, ಇದು *ತ್ಸದ್ದಿಕ್* ಎಂಬುದಕ್ಕೆ ಸಮವಾದದ್ದು) ಎಂದು ಪರಿಗಣಿಸಿದನು (2 ಪೇತ್ರ 2:6-8). ಧರ್ಮಶಾಸ್ತ್ರ, ಪ್ರವಾದಿಗಳ ಪುಸ್ತಕಗಳು, ಮತ್ತು ಕೀರ್ತನೆಗಳಲ್ಲಿ ಅನೇಕ ಸಾರಿ ಈ ವಿಧವಾದ ಹೋಲಿಕೆ ಮಾಡುವುದು ಸಂಭವಿಸುತ್ತದೆ. ಉದಾಹರಣೆಗೆ, "ಯೆಹೋವನು ನೀತಿವಂತರನ್ನು ಪ್ರೀತಿಸುತ್ತಾನೆ ... ಆದರೆ ದುಷ್ಟರ ಮಾರ್ಗವನ್ನು ಡೊಂಕು ಮಾಡಿಬಿಡುತ್ತಾನೆ" (ಕೀರ್ತನೆ 146:8, 9).

ಸೊದೋಮಿಗಾಗಿ ಅಬ್ರಹಾಮನು ಮಾಡಿದ ವಿಜ್ಞಾಪನೆಯಲ್ಲಿ, ಆತನು ನೀತಿವಂತರನ್ನು ಮತ್ತು ಅನೀತಿವಂತರನ್ನು ದೇವರು ಒಂದೇ ರೀತಿಯಲ್ಲಿ ಕಾಣುವುದನ್ನು ಊಹಿಸಿಕೊಳ್ಳಲಾಗದು ಎಂದು ಎತ್ತಿ ತೋರಿಸಿದನು. ಆತನು ಈ ಯೋಚನೆಗೆ ಹಿಂದಿರುಗುವ ಪ್ರತಿ ಸಾರಿ, ಅಂಥ ಕೃತ್ಯದ ಕಡೆಗೆ ತನಗಿರುವ ಆಕ್ಷೇಪಣೆಯನ್ನು ಮತ್ತಷ್ಟು ತೀಕ್ಷ್ಣಗೊಳಿಸಲು ಭಾಷೆಯನ್ನು ವ್ಯತ್ಯಾಸಗೊಳಿಸಿ ನುಡಿದನು. ಮೊದಲನೆಯದಾಗಿ, ಆತನು "ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವಿಯಾ?" ಎಂದು ದೇವರನ್ನು ಕೇಳಿದನು (18:23). ಈ ಪ್ರಶ್ನೆಯು ದೇವರು ಅಜಾಗರೂಕತೆಯಿಂದಿರುವೆಂಬ ಅಭಿಪ್ರಾಯವನ್ನು ಮೂಡಿಸುವದಾಗಿದೆ; ಆತನು ತನಗೆ ಅರಿವಿಲ್ಲದೆ ದುಷ್ಟರ ಸಂಗಡ ನೀತಿವಂತರ ಮೇಲೆಯೂ ತನ್ನ ಕೋಪಾಗ್ನಿಯನ್ನು ಸುರಿಸುವನೆಂಬ ಸೂಚ್ಯಾರ್ಥವನ್ನು ನೀಡುತ್ತದೆ.

ಎರಡನೆಯ ಆಕ್ಷೇಪಣೆಯು ಇನ್ನಷ್ಟು ತೀಕ್ಷ್ಣವಾಗಿತ್ತು; ದೇವರು **ಆ ರೀತಿಯಾಗಿ ದುಷ್ಟರಿಗೂ ಶಿಷ್ಟರಿಗೂ ಭೇದಮಾಡದೆ ದುಷ್ಟರ ಸಂಗಡ ನೀತಿವಂತರನ್ನೂ ಸಂಹರಿ**ಸಬಹುದು ಎಂದು ಯೋಚಿಸಿದಾಗ ಮೂಲಪಿತೃವು ಭಯದಿಂದ ಹಿಂಜರಿತವನ್ನು ಅನುಭವಿಸಿದನು (18:25). "ಸಂಹರಿಸು" (מוּת, *ಮುಥ್*) ಎಂದರೆ "ಮರಣವನ್ನುಂಟು ಮಾಡು" ಎಂದರ್ಥ; ಮತ್ತು ಇದು ಅನಂತರದಲ್ಲಿ ಮರಣದಂಡನೆಗೆ ಅರ್ಹವಾದ ಅಪರಾಧ ಮಾಡಿದವನಿಗೆ, ದೇವರ ಧರ್ಮಶಾಸ್ತ್ರಕ್ಕನುಗುಣವಾಗಿ ಹತಗೊಳಿಸಲು ಬಳಸುವ ಭಾಷೆಯಾಗಿ ಮಾರ್ಪಟ್ಟಿತ್ತು (ಯಾಜಕಕಾಂಡ 20:2; ಅರಣ್ಯಕಾಂಡ 35:19, 21). ಅಬ್ರಹಾಮನ ಪ್ರಶ್ನೆಯು ಮೂಲಭೂತ ಪ್ರಮೇಯವು ಏನೆಂದರೆ ನೀತಿವಂತರಾಗಿ ಜೀವಿಸುವವರು ದೇವರ ನ್ಯಾಯತೀರ್ಪಿನ್ನು ಎದುರಿಸುವ ಗಂಡಾಂತರದಲ್ಲಿರಬಹುದಾದ ಒಂದು ಭ್ರಷ್ಟ ಸಮಾಜವನ್ನು ಸಂರಕ್ಷಿಸುವ ನೈತಿಕ ಮೌಲ್ಯವೊಂದನ್ನು ಹುಟ್ಟಿಸುವವರಾಗಿದ್ದಾರೆ ಎಂಬುದೆ. ಈ ವಿಚಾರಧಾರೆಯ ಪ್ರಕಾರವಾಗಿ, ದುಷ್ಟರಾಗಿರುವ ಅನೇಕ ಜನರಿಗಿಂತಲೂ ನೀತಿವಂತರಾಗಿರುವ ಹತ್ತು ಮಂದಿಯು, ಒಂದು ಪರಿಶುದ್ಧ ಶೇಷ ಜನರಾಗಿ ಯೆಹೋವನಿಗೆ ಹೆಚ್ಚು ಮುಖ್ಯವಾಗಿರತಕ್ಕದ್ದು ಎಂದಾಗಿರುತ್ತದೆ. ಭೂಲೋಕದ ಜನಾಂಗಗಳು ಅಬ್ರಹಾಮನ ಮತ್ತು ಆತನ ಸಂತಾನದಲ್ಲಿ ಹೇಗೆ

ಆಶೀರ್ವಾದವನ್ನು ಪಡೆಯುವವರಾಗಿದ್ದರೋ, ಹಾಗೆಯೇ ಸೊದೋಮಿನಲ್ಲಿದ್ದ ಅಪರಾಧಿಗಳು ಅವಮಾನಕರವಾದ ಅಪರಾಧಗಳನ್ನು ಮಾಡದೆ ನಿರಫರಾಧಿಗಳಾಗಿರುವ ತಮ್ಮ ಜೊತೆಯ ನಾಗರೀಕರ ಜೀವಿತಗಳಿಂದಾಗಿ ಕರುಣೆಯನ್ನು ಪಡೆಯತಕ್ಕದ್ದೆಂದು ಆತನು ಯೋಚಿಸಿದನು. ಒಂದು ಅರ್ಥದಲ್ಲಿ, ನೀತಿವಂತರು ದುಷ್ಟರ ಪರವಾಗಿ ಪಾಪಪ್ರಾಯಶ್ಚಿತ್ತ ಮಾಡುವವರಾಗಿ ಜೀವಿಸುತ್ತಾರೆ ಎಂದಾಗುತ್ತದೆ.

ಅಬ್ರಹಾಮನು ಮಾಡಿದ ಮೂರನೆಯ ಆಕ್ಷೇಪಣೆಯು ಇದೇ ರೀತಿಯಲ್ಲಿ ಇತ್ತು: ದೇವರು ನೀತಿವಂತರನ್ನು ಮತ್ತು ದುಷ್ಟರನ್ನು ಒಂದೇ ರೀತಿಯಲ್ಲಿ ಕಾಣುವುದನ್ನು ಆತನಿಂದ ಊಹಿಸಿಕೊಳ್ಳಲಾಗಲಿಲ್ಲ. ಅಂಥ ಯೋಚನೆಯು ಅವನಿಗೆ ಹೆವರಿಕೆಯನ್ನುಂಟು ಮಾಡಿತ್ತು, ಮತ್ತು **ನಿನ್ನಿಂದ ಎಂದಿಗೂ ಆಗಬಾರದು; ಸರ್ವಲೋಕಕ್ಕೆ ನ್ಯಾಯತೀರಿಸುವವನು ನ್ಯಾಯವನ್ನೇ ನಡಿಸುವನಲ್ಲವೇ** ಎಂಬ ಮಾತುಗಳಲ್ಲಿ ಆತನ ಭಾವೋದ್ರೇಕವು ಸ್ಪಷ್ಟವಾಗಿ ಕಾಣಿಸುತ್ತದೆ (18:25). ಒಟ್ಟಾರೆಯಾಗಿ, ದೇವರು ಒಂದು ವೇಳೆ ನೀತಿವಂತರನ್ನು "ಸಂಹರಿಸುವದೇ" (ಮರಣ ವಿಧಿಸುವುದು) ಆದಲ್ಲಿ ತನ್ನನ್ನು ಅಪರಾಧಕ್ಕೊಳಪಡಿಸಬೇಡ ಎಂಬುದು ದೇವರಿಗೆ ಮೂಲಪಿತೃವು ಮಾಡಿದ ಮನವಿಯಾಗಿತ್ತು. ಬೈಬಲಿನ ಮೂಲಭೂತ ಸತ್ಯಗಳಲ್ಲಿ ಒಂದು ಯಾವದೆಂದರೆ, ಲೋಕವನ್ನು ಮತ್ತು ಅದರಲ್ಲಿರುವ ಸಮಸ್ತವನ್ನು ಉಂಟು ಮಾಡಿರುವ ಯೆಹೋವನು ಮನುಷ್ಯರ ಸಂಗಡದ ಸಕಲ ವ್ಯವಹಾರಗಳಲ್ಲಿ ನೀತಿ ಮತ್ತು ನ್ಯಾಯವುಳ್ಳವನಾಗಿರುವನು ಎಂಬುದೆ. ಕೆಲವು ಸಾರಿ ಆತನು ಅನ್ಯಾಯವಾಗಿ ನಡೆದುಕೊಳ್ಳುವನೋ ಎಂಬಂತೆ ಕಂಡಾಗ್ಯೂ, ಇದು ಸತ್ಯವಾಗಿರುವಂತದ್ದು (ಧರ್ಮೋಪದೇಶಕಾಂಡ 32:4, 5; ಕೀರ್ತನೆ 9:7–9; 96:10; 97:1, 2; ರೋಮಾ 2:5–11).

**ವಚನಗಳು 24, 26-33.** ಪಟ್ಟಣದಲ್ಲಿ ಕೇವಲ **ಐವತ್ತು ಮಂದಿ ನೀತಿವಂತರು** ವಾಸಿಸುತ್ತಿರುವದಾದರೆ ಆತನು ಸೊದೋಮನ್ನು ಉಳಿಸುವನೋ ಎಂದು ದೇವರಲ್ಲಿ ಅಬ್ರಹಾಮನು ವಿಚಾರಿಸಿದನು (18:24). ಆ ಪ್ರಸ್ತಾಪಕ್ಕೆ ಯೆಹೋವನ ಸಮ್ಮತಿಯನ್ನು ಪಡೆದುಕೊಂಡವನಾಗಿ (18:26), ಮೂಲಪಿತೃವು ಅಲ್ಲಿ **ನಾಲ್ವತ್ತೈದು ಮಂದಿ** ಸಿಕ್ಕಿದರೆ ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ಯೆಹೋವನನ್ನು ಒತ್ತಾಯಿಸಿದನು (18:28). ಪುನಃ, ಯೆಹೋವನು ಅಬ್ರಹಾಮನ ಸಲಹೆಗೆ ಸಮ್ಮತಿಯನ್ನು ಸೂಚಿಸಿದನು; ಮೂಲಪಿತೃವು ಎರಡು ಸಾರಿ ಆ ಸಂಖ್ಯೆಯನ್ನು ಐದರಂತೆ ಕಡಿಮೆಗೊಳಿಸಿ "ಐವತ್ತು ಮಂದಿ"ಯಿಂದ "ನಾಲ್ವತ್ತೈದು" ಮತ್ತು ನಾಲ್ವತ್ತೈದರಿಂದ **ನಾಲ್ವತ್ತು** ಮಂದಿಗೆ ಇಳಿಸಿದನು (18:29).

ದೇವರನ್ನು ಈ ವಿಧದಲ್ಲಿ ವಿಚಾರಿಸುವ ಮೂಲಕವಾಗಿ ಸೊಕ್ಕಿನವನಂತೆ ಅಥವಾ ಅಗೌರವಕರವಾಗಿ ನಡೆದುಕೊಳ್ಳುವವನಂತೆ ಕಾಣಿಸುವುದು ಮೂಲಪಿತೃವಿಗೆ ಇಷ್ಟವಿರಲಿಲ್ಲ; ಆದ್ದರಿಂದ, ತಾನು **ಮಣ್ಣೂ ಬೂದಿಯೂ ಆಗಿರುವ**ವನು ಎಂಬುದಾಗಿ ಅರಿಕೆ ಮಾಡುತ್ತಾನೆ (18:27). ಈ ಮಾತುಗಳು ಆತನಲ್ಲಿರುವ ಮಾನವ ದೌರ್ಬಲ್ಯತೆಯನ್ನು ಸೂಚಿಸುತ್ತವೆ; ಆತನು "ಮರಣಿಸಿ ಪುನಃ ಮಣ್ಣಿಗೆ ಸೇರುವದಕ್ಕೆ" ನೇಮಿಸಲ್ಪಟ್ಟಿದ್ದನು (2:7; 3:19; ಯೋಬ 30:19; ಕೀರ್ತನೆ 103:14).[11] ಹಾಗಿದ್ದರೂ, ಅಬ್ರಹಾಮನು ಸಕಾರಾತ್ಮಕ ಉತ್ತರಗಳನ್ನು ಪಡೆದುಕೊಂಡ ಹಾಗೆ, ಆತನು ಇನ್ನು ಸ್ವಲ್ಪ ಹೆಚ್ಚು ಧೈರ್ಯಗೊಂಡು ಹತ್ತರಂತೆ ಮೂರು ಸಾರಿ ಸಂಖ್ಯೆಯನ್ನು ಕಡಿಮೆಗೊಳಿಸಿದನು, "ನಾಲ್ವತ್ತು" ದಿಂದ **ಮೂವತ್ತು** ರಿಂದ **ಇಪ್ಪತ್ತು** ಮತ್ತು ಅಲ್ಲಿಂದ **ಹತ್ತು** ವರೆಗೆ ಇಳಿಸುತ್ತಲೇ ಬಂದನು (18:30–32). ಮೂಲಪಿತೃವು ಈ ವಿಷಯದಲ್ಲಿ ಒತ್ತಾಯಿಸುವದನ್ನು ಮುಂದುವರೆಸಿದಂತೆ, ಸೊದೋಮಿನಲ್ಲಿರುವ ನೀತಿವಂತರಿಗೆ ಕರುಣೆಯನ್ನು ತೋರಬೇಕೆಂದು ವಿನಂತಿಸಿಕೊಳ್ಳುತ್ತಿರುವದಕ್ಕಾಗಿ ತನ್ನ ಮೇಲೆ

**ಕೋಪಮಾಡಬಾರದು** ಎಂದು ಯೆಹೋವನನ್ನು ಕೇಳಿಕೊಂಡನು (18:30, 32).

ಆತನ ಅಂತಿಮವಾದ ಮನವಿಯನ್ನು ಮಾಡಿಕೊಳ್ಳುವ ಮುನ್ನ, ಅಬ್ರಹಾಮನು ಬಹುಶಃ ತಾನು ದೇವರನ್ನು ಏನು ಕೇಳಲು ಧೈರ್ಯಮಾಡಿದ್ದಾನೋ ಅದರ ಮಿತಿಯನ್ನು ದಾಟಿರುತ್ತೇನೆಂದು ಭಾವಿಸಿಕೊಂಡಿರಬಹುದು. ಆದದರಿಂದ, ತಾನು ಸೊದೋಮಿನ ನಾಶನದ ಕುರಿತಾಗಿ ಇನ್ನು **ಒಂದೇ ಸಾರಿ** ಮಾತಾಡುತ್ತೇನೆ ಎಂದನು. ಅಲ್ಲಿ "ಹತ್ತು" ಮಂದಿ ನೀತಿವಂತರು **ಸಿಕ್ಕಾರು**, ಆಗ ಅದನ್ನು ಉಳಿಸುವ ಸಾಧ್ಯತೆಯಿದೆಯೋ ಎಂಬುದಾಗಿ ಯೆಹೋವನನ್ನು ವಿಚಾರಿಸಿದನು (18:32). ಮೂಲಪಿತೃವಿನ ಈ ವಿಚಾರಣೆ ನಡಿಸುವಂಥ ಪ್ರಶ್ನೆಗಳನ್ನು ಸಹಿಸಿಕೊಂಡನು, ಪೇತ್ರನು ಅನಂತರದಲ್ಲಿ ಪ್ರಸ್ತಾಪಿಸಿದಂಥ ವಿಧವಾದ ದೀರ್ಘಶಾಂತಿಯನ್ನು ಇಲ್ಲಿ ತೋರ್ಪಡಿಸಿದನು. ದೇವರ ಪ್ರಾಥಮಿಕ ಗುಣಸ್ವಭಾವಗಳಲ್ಲೊಂದು ಎಂದರೆ "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು" ಬಯಸುವವನಾಗಿದ್ದಾನೆ (2 ಪೇತ್ರ 3:9). ಸರಳವಾಗಿ ಹೇಳುವದಾದರೆ, "ದೇವರು ಪ್ರೀತಿಸ್ವರೂಪಿ" (1 ಯೋಹಾನ 4:8) ಆಗಿರುವದರಿಂದ, ಆತನು ಮೊದಲು ತೋರುವಂಥ ಒಲವು ದಂಡಿಸಬೇಕು ಅಥವಾ ನಾಶಮಾಡಬೇಕು ಎಂದಾಗಿರುವದಿಲ್ಲ, ಆದರೆ ಆತನ ಪರಿಶುದ್ಧತೆ ಮತ್ತು ನೀತಿಗಳು ರಾಜಿ ಮಾಡಿಕೊಳ್ಳಲ್ಪಡುವಷ್ಟು ಕಾಲ ಕ್ಷಮಿಸಿ ರಕ್ಷಣೆಯನ್ನುಂಟು ಮಾಡುವದೇ ಆಗಿರುತ್ತದೆ. ಯೆಹೋವನು ಪಾಪವು ಮುಖ್ಯವೇ ಅಲ್ಲ ಎಂಬಂತೆ ಕೇವಲ ಕಂಡರೂ ಕಾಣದಂತೆ ಇರುವ ಅತಿ ಮುದ್ದು ಮಾಡುವ ತಾತನಂತಿದ್ದಾನೆ ಎಂಬುದಾಗಿ ಅನ್ಯಜನರು ಆತನ ವಿಷಯದಲ್ಲಿ ಭಾವಿಸಿಕೊಳ್ಳದ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದೆಂದು ಇದರರ್ಥವಾಗುತ್ತದೆ. ಸಂಭಾಷಣೆಯು ಅಂತ್ಯಗೊಂಡ ಹಾಗೆ, **ಯೆಹೋವನು ... ಹೊರಟುಹೋದನು; ಅಬ್ರಹಾಮನು ತನ್ನ ಸ್ಥಳಕ್ಕೆ ಹಿಂದಿರುಗಿ ಹೋದನು** (18:33) - ಅಂದರೆ, ಅಬ್ರಹಾಮನು "ಮಮ್ರೆತೋಪಿಗೆ" ಹಿಂದಿರುಗಿದನು (18:1).

## ಅನ್ವಯಿಸುವಿಕೆ

### ಒಬ್ಬ ನಂಬಿಕೆಯ ಮನುಷ್ಯನು (ಅಧ್ಯಾಯ 18)

*ನಂಬಿಕೆಯ ಜನರು ಅನಿರೀಕ್ಷಿತವಾಗಿ ಬಂದ ಅತಿಥಿಗಳಿಗೆ ಸೌಜನ್ಯದಿಂದ ಪ್ರತಿಕ್ರಿಯಿಸುತ್ತಾರೆ* (18:1-8). ಮೂವರು ಅಪರಿಚಿತ ಅತಿಥಿಗಳು ತನ್ನ ಮುಂದೆ ಏಕಾಏಕಿ ಕಾಣಿಸಿಕೊಂಡಾಗ ಮದ್ಯಾಹ್ನದ ಬಿಸಿಲಿನಲ್ಲಿ ವಿಶ್ರಮಿಸಿಕೊಂಡಿದ್ದ ಅಬ್ರಹಾಮನು ಆಶ್ಚರ್ಯಗೊಂಡನು. ಆತನು ಮೇಲೆದ್ದು ಅವರನ್ನು ಸ್ವಾಗತಿಸುವದಕ್ಕೆ ಓಡಿದನು, ಅವರು ಪರಲೋಕದಿಂದ ಬಂದ ಅತಿಥಿಗಳೆಂದು, ಅವರೊಳಗೆ ಒಬ್ಬನು ಯೆಹೋವನು ಎಂಬುದು ಆತನಿಗೆ ಗೊತ್ತಿರಲಿಲ್ಲ. ಅವರನ್ನು ಸೇರಿಸಿಕೊಂಡು ಅವರಿಗೆ ಅದ್ದೂರಿಯಾದ ಭೋಜನದ ಏರ್ಪಾಡು ಮಾಡಿದವನಾಗಿ, ಮೂಲಪಿತೃವು ಎಲ್ಲಾ ವಿಶ್ವಾಸಿಗಳಿಗೆ ಅತಿಥಿಸತ್ಕಾರಕ್ಕೆ ಒಂದು ಮಾದರಿಯಾದನು.

ಇಬ್ರಿಯರಿಗೆ ಪತ್ರಿಕೆಯ ಲೇಖಕನು ತಮ್ಮ ಸಹೋದರರ ಕಡೆಗೆ ಪ್ರೀತಿಯುಳ್ಳವರಾಗಿರಬೇಕು ಮತ್ತು "ಅತಿಥಿಸತ್ಕಾರಮಾಡುವದನ್ನು ಮರೆಯಬೇಡಿರಿ; ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನೂ ಸತ್ಕರಿಸಿದ್ದಾರೆ" ಎಂಬುದಾಗಿ ಬೇಡಿಕೊಳ್ಳುವ ವೇಳೆ ಖಂಡಿತವಾಗಿಯೂ ಅಬ್ರಹಾಮನನ್ನು ಮನಸ್ಸಿನಲ್ಲಿಟ್ಟುಕೊಂಡು

ಹೇಳಿರಬಹುದಾಗಿದೆ (ಇಬ್ರಿಯ 13:2). ಮೂಲಪಿತೃವು ತೋರಿಸಿ ಕೊಟ್ಟ ರೀತಿಯ ಸತ್ಕಾರದ ಕೃತ್ಯಗಳನ್ನು ತನ್ನ ಹಿಂಬಾಲಕರು ನಡಿಸಬೇಕೆಂದು ಯೆಹೋವನು ಎದುರು ನೋಡುತ್ತಾನೆ. ಹಸಿವೆ ಮತ್ತು ದಾಹಗೊಂಡಿರುವ ಅಪರಿಚತರ ವಿಷಯದಲ್ಲಿ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬುದು ಯೆಹೋವನ ಕಡೆಗೆ ನಾವು ಹೊಂದಿರುವ ನಿಜವಾದ ಸಮರ್ಪಣೆ ಅಥವಾ ಸಮರ್ಪಣೆಯ ಕೊರತೆಯನ್ನು ಪ್ರತಿಬಿಂಬಿಸುತ್ತದೆ. ನ್ಯಾಯತೀರ್ಪಿನ ದಿನದಂದು ಪರಿಶೀಲಿಸಲ್ಪಡಲಿರುವ ಶಿಷ್ಯತ್ವದ ಪರೀಕ್ಷೆಗಳಲ್ಲಿ ಕೆಲವು ಎಂದರೆ ನಾವು ಹಸಿದವರಿಗೆ ಆಹಾರವನ್ನು ಕೊಟ್ಟೆವೋ, ದಾಹದಿಂದಿರುವವರಿಗೆ ನೀರನ್ನು ಒದಗಿಸಿದೆವೋ, ಮತ್ತು ಪರದೇಶಿಗಳಿಗೆ ಮನೆಯಲ್ಲಿ ಸೇರಿಸಿಕೊಂಡಿರೋ ಎಂಬುವುಗಳೇ (ಮತ್ತಾಯ 25:35). ನ್ಯಾಯತೀರ್ಪಿನ ಕುರಿತಾಗಿ ಯೇಸುವು ಮಾಡುವ ಬಣ್ಣನೆಯಲ್ಲಿ, ಅರಸನು ಹೀಗೆ ಹೇಳಿದನು, "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 25:40).

*ವಿಶ್ವಾಸಿಗಳು ಯೆಹೋವನ ವಾಗ್ದಾನಗಳಲ್ಲಿ ಭರವಸವಿಡುವದನ್ನು, ಅವು ನಿರಾಧಾರವೆಂಬುದಾಗಿ ಕಂಡಾಗ್ಯೂ ಭರವಸವನ್ನಿಡತಕ್ಕದ್ದು* (18:9-15). ಸಾರಳಿಗೆ ಬರುವ ವರ್ಷದಲ್ಲಿ ಒಬ್ಬ ಮಗನು ಹುಟ್ಟುವನು ಎಂಬುದಾಗಿ ಯೆಹೋವನು ವಾಗ್ದಾನ ಮಾಡಿದಾಗ, ಈ ಮುಂಚೆ ಅಬ್ರಹಾಮನು ಮಾಡಿದ್ದ ರೀತಿಯಲ್ಲಿಯೇ (17:17), ಇವಳು ಸಹ ನಂಬದವಳಾಗಿ ನಕ್ಕಳು. ಇಬ್ಬರು ವ್ಯಕ್ತಿಗಳು ತಮಗಿರುವ ವಯಸ್ಸಿನಲ್ಲಿ - ಸಾರಳು ಎಂಭತ್ತೊಭತ್ತು ವರ್ಷ ಮತ್ತು ಅಬ್ರಹಾಮನು ತೊಂಭತ್ತೊಂಭತ್ತು ವರ್ಷ - ಸ್ವಾಭಾವಿಕ ದಾರಿಯಲ್ಲಿ ಒಂದು ಮಗುವನ್ನು ಹಡೆಯುವದಕ್ಕೆ ಸಾಧ್ಯವಿರಲಿಲ್ಲ. ಅಂತಹ ಸಂದೇಹತನಕ್ಕೆ ಯೆಹೋವನ ಪ್ರತಿಕ್ರಿಯೆಯು ಹೀಗಿತ್ತು: "ಯೆಹೋವನಿಗೆ ಅಸಾಧ್ಯವಾದದ್ದುಂಟೋ?" (18:14). ಮಕ್ಕಳನ್ನು ಹಡೆಯುವ ವಿಷಯದಲ್ಲಿ ಅವರ ದೇಹಗಳು "ಮೃತಪ್ರಾಯ" ದವುಗಳಾಗಿದ್ದಾಗ್ಯೂ, ನಿರೀಕ್ಷೆಗೆ ಆಸ್ಪದವಿಲ್ಲದಿದ್ದರೂ ಅಬ್ರಹಾಮನು (ಮತ್ತು ಸಾರಳು) ಅಂತಿಮವಾಗಿ ದೇವರು ವಾಗ್ದಾನ ಮಾಡಿದ್ದ ಸಂಗತಿಯನ್ನು ನಂಬಿದ್ದರು, ಅದೇನೆಂದರೆ "ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು" ನಂಬಿದನು (ರೋಮಾ 4:18-24). ಇಸಾಕನ ಜನನವಾಗುವದರೊಂದಿಗೆ, ದೇವರ ವಾಗ್ದಾನದಲ್ಲಿ ಅವರಿಟ್ಟ ನಂಬಿಕೆಯು ಸರಿಯೆಂದು ಸಾಭಿತುಗೊಂಡಿತ್ತು, ಮೊದಲ ಬಾರಿಗೆ ಅದನ್ನು ಕೇಳಿಸಿಕೊಂಡಾಗ ಅದು ನಂಬುವದಕ್ಕೆ ಅಸಾಧ್ಯವಾಗಿತ್ತಾದರೂ ಅವರು ನಂಬಿದ್ದರು.

ಪೌಲನು ಸಹ ಅಪನಂಬಿಕೆಯ ಸಮಸ್ಯೆಯ ಬಗ್ಗೆ, ವಿಶೇಷವಾಗಿ ಸತ್ತವರಿಗೆ ಪುನರುತ್ಥಾನವಾಗುವದೆಂಬ ಕುರಿತಾದ ಅಪನಂಬಿಕೆಯ ಬಗ್ಗೆ ಮಾತಾಡಿದನು. ಕ್ರಿಸ್ತನ ಎರಡನೆಯ ಬರೋಣದ ವೇಳೆಯಲ್ಲಿ ಸತ್ತವರು ಎಬ್ಬಿಸಲ್ಪಡುವರು ಎಂಬ ಆತನ ಬೋಧನೆಯನ್ನು ಶ್ರೋತೃಗಳು ಕೆಲವು ಸಾರಿ ಸಂಶಯಿಸುತ್ತಿದ್ದರು. ಪೌಲನು ನಿತ್ಯವಾದ ಜೀವಿತದೊಳಗೆ ಪ್ರವೇಶಿಸುವದಕ್ಕಾಗಿ ಪುನರುತ್ಥಾನವಾಗುವದೆಂಬ ಭಾವನೆಯನ್ನು ನಂಬುವದಕ್ಕೆ ಹೋರಾಟವನ್ನು ಅನುಭವಿಸುತ್ತಿದ್ದ ಅನ್ಯಜನಾಂಗದ ಕ್ರೈಸ್ತರನ್ನು ಪ್ರೋತ್ಸಾಹಿಸುವದಕ್ಕಾಗಿ ಕ್ರಿಸ್ತನ ಪುನರುತ್ಥಾನದ ಕುರಿತಾದ ಸಮರ್ಥನೆಯನ್ನು ಮಾಡುತ್ತಾ ವಿಸ್ತಾರವಾಗಿ ಬರೆದನು (ನೋಡಿರಿ 1 ಕೊರಿಂಥ 15).

ಯಾವದೋ ಕಾರಣಕ್ಕಾಗಿ ಇಂದು ಸಂದೇಹಕರ ಮನಸ್ಸುಗಳುಳ್ಳವರು ಒಂದು ದೇಹದ ಪುನರುತ್ಥಾನವು ಸಾಧ್ಯ ಎಂಬುದನ್ನು ನಿರಾಕರಿಸುತ್ತಾರೆ. ಕ್ರೈಸ್ತರೆಂದು ಹೇಳಿಕೊಳ್ಳುವವರಲ್ಲಿ ಸಹ ಕೆಲವರು ಅಂಥ ಭಾವನೆಯನ್ನು ತಿರಸ್ಕರಿಸುತ್ತಾರೆ; ಹೇಗೂ, ಆದಿ ಸಭೆಯ ಏಕೀಕೃತ

ಸಂದೇಶವು ದೇಹದ ಪುನರುತ್ಥಾನವು ಆಗುವದೆಂಬ ಸಿದ್ಧಾಂತವನ್ನು ಬೋಧಿಸುತ್ತಿತ್ತು. ಅದು ಪ್ರಥಮ ಶತಮಾನದಲ್ಲಿ ಅನೇಕರಿಗೆ ಅವಿಶ್ವಸನೀಯವಾಗಿ ಕಂಡಿತಾದರೂ, ಇಷ್ಟೊಂದು ಯುಗಗಳಲ್ಲಿನ ಪ್ರೇರಿತ ಸಾಕ್ಷಿಗಳು ಅದನ್ನು ನಂಬುವದಕ್ಕೆ ಅನೇಕ ವಿಶ್ವಾಸಯೋಗ್ಯವಾದ ಕಾರಣಗಳನ್ನು ಒದಗಿಸಿರುತ್ತವೆ.

ಮೊದಲನೆಯದಾಗಿ, ಕ್ರಿಸ್ತನು ಮರಣಿಸುವನು ಮತ್ತು ಪುನರುತ್ಥಾನಗೊಳ್ಳುವನು ಎಂಬುದಾಗಿ ದೇವರು ಹಾಗೂ ಯೇಸು ಇಬ್ಬರೂ ವಾಗ್ದಾನ ಮಾಡಿದರು (ಯೆಶಾಯ 53:1-12; ಮತ್ತಾಯ 16:21; ಯೋಹಾನ 10:17, 18; ಅಪೊಸ್ತಲರ ಕೃತ್ಯಗಳು 2:22-24, 29-31).

ಎರಡನೆಯದಾಗಿ, ಅಪೊಸ್ತಲರು, ಜೊತೆಗೆ ಐನೂರು ಮಂದಿ ಬೇರೆ ಸಾಕ್ಷಿಗಳವರು ಸಹ ಶಿಲುಬೆಗೇರಿಸಲ್ಪಟ್ಟ ನಂತರದಲ್ಲಿ ತಾವು ಯೇಸುವನ್ನು ಜೀವಂತವಾಗಿ ಕಂಡೆವು ಎಂದು ಸಾಕ್ಷಿ ಹೇಳಿರುತ್ತಾರೆ. ಕೆಲವರು ಆತನನ್ನು ಸ್ಪರ್ಶಿಸಿದರು ಮತ್ತು ಆತನೊಂದಿಗೆ ಊಟವನ್ನು ಸಹ ಮಾಡಿದರು (ಲೂಕ 24:33-43; ಯೋಹಾನ 20:19, 20, 24-29; ಅಪೊಸ್ತಲರ ಕೃತ್ಯಗಳು 2:32-36; 9:1-6; 22:6-10; 1 ಕೊರಿಂಥ 15:1-8).

ಮೂರನೆಯದಾಗಿ, ಯೇಸುವಿನ ಪುನರುತ್ಥಾನದ ಕುರಿತಾಗಿ ಒಬ್ಬ ಸಾಕ್ಷಿಗಾರನಿಗೆ ಆತನ ಪುನರುತ್ಥಾನದ ಕುರಿತು ಸುಳ್ಳು ಹೇಳುವ ಮೂಲಕ ಐಶ್ವರ್ಯವಾಗಲಿ, ಜನಪ್ರಿಯತೆ, ಅಥವಾ ಸ್ಥಾನಮಾನವನ್ನಾಗಲಿ ದೊರಕಲಿಲ್ಲವಷ್ಟೆ. ಅದಕ್ಕೆ ತದ್ವಿರುದ್ಧವಾಗಿ, ಅವರು ತಮ್ಮ ಸ್ನೇಹಿತರು, ಕುಟುಂಬ, ಸ್ವತ್ತು, ಮತ್ತು ಅವರ ಪ್ರಾಣಗಳನ್ನು ಸಹ ಒಳಗೊಂಡಂತೆ ಸಕಲ ಶಾರೀರಿಕವಾದವುಗಳನ್ನು ಕಳೆದುಕೊಳ್ಳುವಂತಾಗಿತ್ತು. ಅನೇಕರು ಯೇಸುವಿನ ಮರಣದ ನಂತರದಲ್ಲಿ ಆತನನ್ನು ಜೀವಂತವಾಗಿ ಕಂಡಿದ್ದೇವೆಂದು ಸಾಕ್ಷಿ ಹೇಳುವದನ್ನು ನಿಲ್ಲಿಸದೆ ಇರುವದಕ್ಕೋಸ್ಕರ ಅಂತಿಮವಾದ ಬೆಲೆಯನ್ನು ತೆತ್ತಬೇಕಾಗಿತ್ತು.

ನಾಲ್ಕನೆಯದಾಗಿ, ಯೇಸುವಿನ ಪುನರುತ್ಥಾನವೇ ನಮಗೆ ಪುನರುತ್ಥಾನವಾಗುವುದೆಂದು ಖಾತ್ರಿಯನ್ನು ನೀಡುವ ಹಾಗೂ ನಮ್ಮ ಭವಿಷ್ಯದ ಗಮ್ಯತೆಯ ಬಗ್ಗೆ ನಿರೀಕ್ಷೆಯನ್ನು ಕೊಡುವುದು ಆಗಿರುತ್ತದೆ. ಇದೇ ಸುವಾರ್ತೆ (ಶುಭವರ್ತಮಾನ) ಆಗಿದೆ; ಮತ್ತು ಅದು ಇಲ್ಲದೆ ಹೋದರೆ, ನಾವು ಇನ್ನೂ ನಮ್ಮ ಪಾಪದಲ್ಲಿರುವವರು ಆಗುತ್ತೇವೆ, ನಮ್ಮ ನಂಬಿಕೆಯು ನಿರರ್ಥಕವಾಗುತ್ತದೆ, ಮತ್ತು ನಮ್ಮ ಜೀವಿತಗಳು ಶೂನ್ಯವಾಗುತ್ತವೆ ಎಂದು ಪೌಲನು ಹೇಳಿದನು (1 ಕೊರಿಂಥ 15:14-22). ಲೋಕದಲ್ಲಿ ಅನೇಕರು ಯಾವದೇ ನಿರೀಕ್ಷೆಯನ್ನು ಒದಗಿಸದಂಥ ಸಂದೇಹಕರವಾದ ಮನೋಭಾವವೊಂದನ್ನು ಹೊಂದಿರುವದನ್ನು ಮುಂದುವರೆಸಿರುತ್ತಾರೆ. ಹೇಗೂ, ಕ್ರೈಸ್ತರಿಗಾದರೋ ಮರಣವು ತನ್ನ ಬಹುಪಾಲು ಕೊಂಡಿಯನ್ನು ಕಳೆದುಕೊಂಡಿದೆ ಮತ್ತು ಜಯದಲ್ಲಿ ನುಂಗಿ ಹಾಕಲ್ಪಟ್ಟಿದೆ ಯಾಕೆಂದರೆ ಕ್ರಿಸ್ತನು ಮರಣದಿಂದ ಎಬ್ಬಿಸಲ್ಪಟ್ಟಿರುತ್ತಾನೆ. ಆತನು ಪಾಪ ಮತ್ತು ಮರಣದ ಮೇಲೆ ಹೊಂದಿರುವ ಜಯದಲ್ಲಿ ನಾವು ಪಾಲುಗಾರರಾಗಿರುತ್ತೇವೆ, ಮತ್ತು “ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ” (ರೋಮಾ 8:37; ನೋಡಿರಿ 1 ಕೊರಿಂಥ 15:54-57).

*ಯೆಹೋವನು ದುಷ್ಟರಿಗೆ ನ್ಯಾಯತೀರ್ಪು ಮಾಡುವುದು ನ್ಯಾಯವಾಗಿದೆ ಎಂಬುದನ್ನು ವಿಶ್ವಾಸಿಗಳು ಅರ್ಥಮಾಡಿಕೊಳ್ಳುವರು* (18:16-22). ಯೆಹೋವನು ಹೀಗೆ ಕೇಳಿಕೊಂಡನು, “ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ?” (18:17). ಆತನು ಮೂಲಪಿತೃವಿನ ಸಂಗಡ ತನ್ನ ಯೋಜನೆಯನ್ನು ಎರಡು ಕಾರಣಗಳಿಗಾಗಿ ಹಂಚಿಕೊಳ್ಳಲು ನಿರ್ಧರಿಸಿದನು: (1) ಅಬ್ರಹಾಮನಿಂದ “ಬಲಿಷ್ಠವಾದ ಮಹಾಜನಾಂಗವು

ಹುಟ್ಟಬೇಕಲ್ಲಾ," ಮತ್ತು ಅವನ ಮೂಲಕ "ಭೂಮಿಯ ಎಲ್ಲಾ ಜನಾಂಗಗಳಿಗೆ" ಆಶೀರ್ವಾದವುಂಟಾಗಲಿತ್ತು (18:18). ಆದದರಿಂದ, ಬಹಳಷ್ಟು ಸಂಖ್ಯೆಯ ಜನರನು (ಸೊದೋಮ, ಗೊಮೋರ, ಮತ್ತು ಯೋರ್ದನ್ ಕಣಿವೆಯಲ್ಲಿದ್ದ ಇತರ ಪಟ್ಟಣಗಳಲ್ಲಿ ಇರುವವರು; 19:24, 25) ತಮ್ಮ ದುಷ್ಟತ್ವದ ನಿಮಿತ್ತವಾಗಿ ನಾಶಗೊಳಿಸಲ್ಪಡಲಿದ್ದ ವೇಳೆಯಲ್ಲಿ, ಅಂಥ ದೈವಿಕ ಚಟುವಟಿಕೆಗೆ ಕಾರಣವೇನೆಂಬುದನ್ನು ದೇವರು ಮೂಲಪಿತೃವಿಗೆ ವಿವರಿಸಿದನು. (2) ಅಬ್ರಹಾಮನು ತನ್ನ ಪುತ್ರಪೌತ್ರರಿಗೆ ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸಬೇಕಾಗಿತ್ತು ಹೀಗೆ ದೇವರು ಅಬ್ರಹಾಮನಿಗಾಗಿ ಮಾಡಿದ್ದ "[ಆತನ ಬಗ್ಗೆ] ವಾಗ್ದಾನವು ನೆರವೇರುವದು" ಸಾಧ್ಯವಾಗುತ್ತಿತ್ತು (18:19). ದೇವರು ಮಾನವನಿಗೆ ಮಾಡಿದ ವಾಗ್ದಾನಗಳು ಹೆಚ್ಚುಕಡಿಮೆ ಯಾವಾಗಲೂ ಶರತ್ತಬದ್ಧವಾಗಿರುತ್ತಿದ್ದವು; ಯೆಹೋವನು ಅವಿಧೇಯರಾದವರ ಮೇಲೆ ತನ್ನ ಆಶೀರ್ವಾದವನ್ನು ಒತ್ತಾಯಪೂರ್ವಕವಾಗಿ ಬರಮಾಡುವವನಾಗಿರಲಿಲ್ಲ. ದೇವರು ಅಬ್ರಹಾಮನ ಸಂತತಿಯವರನ್ನು ಆಶೀರ್ವದಿಸಬೇಕೆಂದರೆ, ಅಬ್ರಹಾಮನು ಅವರಿಗೆ "ಯೆಹೋವನ ಮಾರ್ಗವನ್ನು ಅನುರಿಸಬೇಕೆಂದು ಬೋಧಿಸುವದು" ಮತ್ತು ಅವರ ದೈನಂದಿನ ಜೀವಿತಗಳಲ್ಲಿ ನ್ಯಾಯವನ್ನು ಅನುಸರಿಬೇಕೆಂದು ಬೋಧಿಸುವುದು ಅವಶ್ಯಕವಾಗಿತ್ತು. ಇವುಗಳು ಅವರು ವಾಗ್ದಾನ ದೇಶವನ್ನು ಬಾಧ್ಯವಾಗಿ ಹೊಂದಿಕೊಳ್ಳುವದಕ್ಕೆ ಮತ್ತು ಅದರ ಆಶೀರ್ವಾದಗಳಲ್ಲಿ ಮತ್ತು ವಾಗ್ದಾನಗಳಲ್ಲಿ ಮುಂದುವರೆಯುವದಕ್ಕೆ ಶರತ್ತುಗಳಾದವು (ಧರ್ಮೋಪದೇಶಕಾಂಡ 28:1, 2, 15, 16, 36, 37; 1 ಸಮುವೇಲ 15:22, 23; ಆಮೋಸ 5:21-24; ಮೀಕ 6:6-8).

ದೇವರು ತನ್ನ ಜನರು ನೀತಿವಂತರಾಗಿರಬೇಕು ಮತ್ತು ನ್ಯಾಯವನ್ನು ಆಚರಿಸಬೇಕೆಂದು ಅಪೇಕ್ಷಿಸುವದಕ್ಕೆ ಒಂದು ಕಾರಣವೆಂದರೆ, ಸ್ವಭಾವತಃ ಆತನು ಪರಿಶುದ್ಧನು, ನೀತಿವಂತನು, ಮತ್ತು ನ್ಯಾಯವಂತನು ಆಗಿದ್ದಾನೆಂಬುದೇ. ಯೆಹೋವನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿರುವ ಜನರು ಅನೀತಿಯುಳ್ಳವರು ಮತ್ತು ದುಷ್ಟರು ಆಗಿರುವದಾದರೆ, ಅಂಥ ಜೀವನ ಶೈಲಿಗಳು ಆತನ ಗುಣಸ್ವಭಾವಗಳ ಮೇಲೆ ಪ್ರತಿಫಲನವನ್ನು ಬೀರುತ್ತವೆ (ಯಾಜಕಕಾಂಡ 19:2, 13-18, 29-37; ಯೆಶಾಯ 1:16-23; ಹೋಶೇಯ 4:1-4). ಇಸ್ರಾಯೇಲ್ಯರು ವಿಗ್ರಹಾರಾಧನೆಯಲ್ಲಿ ತೊಡಗಿಸಿಕೊಂಡ ವೇಳೆ - ಪುರುಷ ಮತ್ತು ಸ್ತ್ರೀ ವೇಶ್ಯೆಯರ ಸಂಗಡ ಧಾರ್ಮಿಕ ಆಚಾರದಿಂದ ಕೂಡಿದ ಹಾದರತನ ಮತ್ತು ಅವರ ಮಕ್ಕಳನ್ನು ನರಬಲಿಗಳಾಗಿ ಅರ್ಪಿಸುವದು ಸೇರಿದಂತೆ ಸಕಲ ವಿಧವಾದ ದುಷ್ಕೃತ್ಯಗಳನ್ನು ನಡಿಸುವುದು - ಅನ್ಯಜನರ ಮಧ್ಯದಲ್ಲಿ ದೇವರ ಹೆಸರು ದೂಷಣೆಗೆ ಗುರಿಯಾಗಿತ್ತು (ಯಾಜಕಕಾಂಡ 18:1-30; 2 ಅರಸು 23:1-27; 24:1-4; ಯೆಶಾಯ 52:5; ಯೆಹೆಜ್ಕೇಲ 36:20; ರೋಮಾ 2:24).

ದೇವರು ಜನರನ್ನು ನಿಜವಾದ ಪಶ್ಚಾತ್ತಾಪಕ್ಕೆ ನಡಿಸಲು ವಾಗ್ದಾನ ಮಾಡಲ್ಪಟ್ಟ ಆಶಿರ್ವಾದಗಳು ಮತ್ತು ವಾಗ್ದಾನ ಮಾಡಲ್ಪಟ್ಟ ನ್ಯಾಯತೀರ್ಪು ಎರಡನ್ನೂ ಬಳಸಿಕೊಂಡನು. ದೈವಿಕ ದುಃಖವು ಅವರನ್ನು ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ಬದಲಾವಣೆಯಾಗುವಂತೆ ನಡಿಸಬೇಕೆಂದು ಆತನು ಬಯಸಿದನು. ಹೇಗೂ, ಆತನು ಅವರನ್ನು ಎಷ್ಟು ಹೆಚ್ಚೆಚ್ಚಾಗಿ ಕರೆದನೋ (ಪ್ರವಾದಿಗಳ ಮೂಲಕವಾಗಿ), ಅವರು ಅಷ್ಟೇ ಹೆಚ್ಚಾಗಿ ಆತನಿಂದ ದೂರಕ್ಕೆ ಸಾಗಿದರು (ಹೋಶೇಯ 11:1-7). ಒಂದು ದುರಂತಕರವಾದ ರೀತಿಯಲ್ಲಿ ಹೃದಯದ ಮೊಂಡುತನವು ಉಂಟಾಗಿತ್ತು ಮತ್ತು ಪಶ್ಚಾತ್ತಾಪ ಪಡುವದಕ್ಕೆ ಯಾವ ಅವಕಾಶವನ್ನೂ ಕೊಡಲಿಲ್ಲ. ಈ ಕಾರಣದಿಂದಲೇ ಯೆಹೂದ ಮತ್ತು ಇಸ್ರಾಯೇಲ್ಯ ರಾಜ್ಯದವರು ಕ್ರಮೇಣದಲ್ಲಿ, ತಮ್ಮ ದೇವಾಲಯ, ರಾಜತ್ವ, ದೇಶ, ಸ್ವಾತಂತ್ರ್ಯಗಳನ್ನು ಕಳೆದುಕೊಂಡವರಾಗಿ

ಪರದೇಶಗಳಿಗೆ ಸೆರೆಯಾಳುಗಳಾಗಿ ಕರೆದೊಯ್ಯಲ್ಪಟ್ಟರು.

*ದುಷ್ಟರ ಸಂಗಡ ನೀತಿವಂತರ ಮೇಲೆ ದಂಡನೆಯು ಉಂಟಾಗದಿರಲೆಂದು ವಿಶ್ವಾಸಿಗಳು ಅವರಿಗೋಸ್ಕರ ಯೆಹೋವನ ಮುಂದೆ ವಿಜ್ಞಾಪನೆ ಮಾಡುವರು* (18:23-33). ಈಗಲೂ ಸೊದೋಮ ಮತ್ತು ಗೊಮೋರ ಹಾಗೂ ಸಮೀಪದ ಪಟ್ಟಣಗಳಲ್ಲಿ ನೀತಿವಂತರು ಜೀವಿಸುತ್ತಿದ್ದಾರೆಂದು ಮತ್ತು ದೇವರ ನ್ಯಾಯತೀರ್ಪು ದುಷ್ಟರ ಮೇಲೆ ಬರುವ ವೇಳೆ ಇವರು ಸಹ ಅವರೊಂದಿಗೆ ನಾಶಗೊಳ್ಳುವ ಅಪಾಯದಲ್ಲಿದ್ದಾರೆಂದು ಅಬ್ರಹಾಮನು ನಂಬಿದ್ದನು. ಆದದರಿಂದ, ಆತನು ದೈವಿಕ ನ್ಯಾಯಕ್ಕನುಗುಣವಾಗಿ ಈ ಪಟ್ಟಣಗಳಿಗೋಸ್ಕರ ವಿಜ್ಞಾಪನೆ ಮಾಡಿದನು, ದುಷ್ಟರಿಗಾಗುವ ಗತಿಯು ನೀತಿವಂತರಿಗೆ ಸಹ ಬರುವಂತೆ ದೇವರು ಅವಕಾಶ ಕೊಡುವದಿಲ್ಲ ಎಂದು ನಂಬಿದ್ದನು.

ನಿಶ್ಚಯವಾಗಿಯೂ, ಪ್ರಳಯದ ಕಥೆಯನ್ನು ಮತ್ತು ಪ್ರಳಯಪೂರ್ವದಲ್ಲಿದ್ದ ಜನರಿಗೆ ಪಶ್ಚಾತ್ತಾಪ ಪಡುವಂತೆ ಹಾಗೂ ಬರಲಿರುವ ಪ್ರಳಯದಿಂದ ತಪ್ಪಿಸಿಕೊಳ್ಳುವ ಹಾಗೆ ನಾವೆಯನ್ನು ಸೇರಿಕೊಳ್ಳಬೇಕೆಂದು “ಸುನೀತಿಯನ್ನು ಸಾರುವವನಾಗಿ” ನೋಹನನ್ನು ನೇಮಿಸಿದ್ದನೆಂಬುದರ ಕುರಿತಾಗಿ ಕೇಳಿಸಿಕೊಂಡಿದ್ದನು (2 ಪೇತ್ರ 2:5). ಈ ಸಂದರ್ಭದಲ್ಲಿ, ಮೂಲಪಿತೃವು ದುಷ್ಟ ಪಟ್ಟಣಗಳ ಮೇಲೆ ಬರಲಿದ್ದ ನಾಶನದ ಕುರಿತಾಗಿ ತಿಳಿಸುವದಕ್ಕೆ ಸಾಕಷ್ಟು ಸಮಯವು ಇರುವದಿಲ್ಲ ಎಂಬುದನ್ನು ಗ್ರಹಿಸಿಕೊಂಡಿದ್ದನೆಂದು ತೋರುತ್ತದೆ. ಯೆಹೋವನು ಸ್ವಲ್ಪ ಕಾಲದೊಳಗೆ ಯೋರ್ದನ್ ಕಣಿವೆಯಲ್ಲಿನ ಪಟ್ಟಣಗಳ ಮೇಲೆ ತೆರೆದು ಬಿಡಲಿದ್ದ ನಾಶನದಿಂದ ನೀತಿವಂತರನ್ನು - ಲೋಟ, ಆತನ ಕುಟುಂಬ, ಮತ್ತು ಬಹುಶಃ ಇನ್ನು ಕೆಲವು ಜನರನ್ನು - ತಪ್ಪಿಸಿ ಕಾಪಾಡುವ ಹಾಗೆ ಅವರಿಗೋಸ್ಕರ ಆತನ ಮುಂದೆ ವಿಜ್ಞಾಪನೆಯನ್ನು ಮಾಡುವದೊಂದೇ ಆತನಿಗಿದ್ದ ದಾರಿಯಾಗಿತ್ತು.

ಅಮೋರಿಯರ “ಅಪರಾಧವು ಇನ್ನೂ ಪೂರ್ಣಸ್ಥಿತಿಗೆ ಬರಲಿಲ್ಲ” ಎಂಬ ಕಾರಣಕ್ಕಾಗಿ ದೇವರು ಅವರನ್ನು ಇದುವರೆಗೆ ಉಳಿಸಿದ್ದಾನೆಂಬುದನ್ನು ಅಬ್ರಹಾಮನು ಅರ್ಥಮಾಡಿಕೊಂಡಿರಬಹುದಾಗಿದೆ (15:16). ಆತನು ಸಾಲೇಮಿನ ಅರಸನು/ಯಾಜಕನು ಆಗಿದ್ದ ಮೆಲ್ಕೀಚೆದೆಕನನ್ನು ಜ್ಞಾಪಿಸಿಕೊಂಡಿರಬಹುದಾಗಿದೆ, ಆತನು ಅನ್ಯಧರ್ಮಿಯರ ನಡುವೆ “ಪರಾತ್ಪರನಾದ ದೇವರನ್ನು” ಪ್ರತಿನಿಧಿಸುತ್ತಿದ್ದನಷ್ಟೆ (14:18). ಈ ಅನ್ಯಜನಾಂಗದ ಯಾಜಕನು ತನ್ನ ಪ್ರಾಂತ್ಯದಲ್ಲಿನ ಜನರ ಮೇಲೆ ಸಂರಕ್ಷಕವಾದ ಪ್ರಭಾವವನ್ನು ಬೀರಿದವನಾಗಿದ್ದ ಒಬ್ಬ ನೀತಿವಂತನಾದ ಅರಸನು ಆಗಿದ್ದನೆಂಬುದು ಸ್ಪಷ್ಟವಾಗಿರುವದರಿಂದ (ನೋಡಿರಿ ಇಬ್ರಿಯ 7:2), ಸೊದೋಮ ಮತ್ತು ಗೊಮೋರಗಳಲ್ಲಿ ಸಾಕಷ್ಟು ನೀತಿವಂತರು ಜೀವಿಸುತ್ತಿರುವದಾದರೆ ದೇವರು ಆ ಪಟ್ಟಣಗಳನ್ನು ಉಳಿಸುವನು ಎಂಬ ನಿರ್ಣಯಕ್ಕೆ ಅಬ್ರಹಾಮನು ಬಂದಿರಬಹುದಾಗಿದೆ. ಕೆಲವೇ ಕೆಲವರಲ್ಲಿ ಮಾತ್ರವೇ ನೈತಿಕ ಒಳ್ಳೇತನವಿರುವದಾದರೂ, ಅದು ಒಂದು ದುಷ್ಟ ಸಮಾಜವನ್ನು ಸಂರಕ್ಷಿಸುವದರ ದೆಸೆಯಲ್ಲಿ ಕಾರ್ಯವನ್ನು ಮಾಡುವಂಥ ಒಂದು ಕಾರ್ಯಸಾಧಕ ಶಕ್ತಿಯನ್ನು ಹೊಂದಿರುತ್ತದೆ. ನೀತಿಯುಳ್ಳ ನ್ಯಾಯಾಧಿಪತಿಯಾಗಿ, ದೇವರು ದುಷ್ಕೃತ್ಯಗಳನ್ನು ನಡಿಸುವವರ ಮೇಲೆ ತನ್ನ ಕೋಪಾಗ್ನಿಯನ್ನು ಸುರಿಸುವದಕ್ಕೆ ಮುನ್ನ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವನು.

ಪಾಪಭರಿತ ಜನರ ಪರವಾಗಿ ಮೂಲಪಿತೃವು ಮಾಡಿದ ವಿಜ್ಞಾಪನೆಯು ಜೊತೆಯ ಮಾನವರ ಮೇಲೆ ಆತನಿಗಿರುವ ಕಾಳಜಿ ಹಾಗೂ ಪರಾನುಭೂತಿಗಳನ್ನು ಸೂಚಿಸುತ್ತದೆ, ಅವರು ಸಹ ತಮ್ಮೊಳಗೆ ದೇವರ ಸ್ವರೂಪವನ್ನು ಹೊಂದಿರುವವರಾಗಿದ್ದರಷ್ಟೆ. ಇದು ಮತ್ತೊಬ್ಬರಿಗಿಂತ ತಮ್ಮನ್ನು ಶ್ರೇಷ್ಠರೆಂದು ಭಾವಿಸಿಕೊಳ್ಳುವ ಹಾಗೂ ಬೇರೆಯವರು ತಮ್ಮ

ಪಾಪಗಳು ಹಾಗೂ ಅಪರಾಧಗಳಿಗೆ ನ್ಯಾಯವಾಗಿಯೇ ದಂಡನೆಯನ್ನು ಪಡೆದುಕೊಳ್ಳುವಾಗ ಸಂತೋಷ ಪಡುವಂಥ ದುರಹಂಕಾರವನ್ನು ನಿರ್ಮೂಲನೆ ಮಾಡುವದಾಗಿದೆ. ಅನಂತರದಲ್ಲಿ ಪೌಲನು ಹೇಳಿದ ಪ್ರಕಾರ, ನಿಜವಾದ ಪ್ರೀತಿಯು "ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ" (1 ಕೊರಿಂಥ 13:6). ಅಲ್ಲದೆ ಅದರಲ್ಲಿ ನಮ್ಮ ಸ್ವಂತ ಪಾಪಗಳ ಕುರಿತಾಗಿ ದೀನತೆಯಿಂದ ಪ್ರಜ್ಞೆಯುಳ್ಳವರಾಗಿರುವಂತೆ ಸಹ ಮಾಡುತ್ತದೆ ಮತ್ತು ನಾವು ಯಾವದಕ್ಕೆ ಯೋಗ್ಯರಾಗಿದ್ದವೋ ಅದನ್ನು ಯೆಹೋವನು ನಮ್ಮ ಮೇಲೆ ಬರಮಾಡದಿರುವದಕ್ಕಾಗಿ ಕೃತಜ್ಞತೆಯುಳ್ಳವರಾಗಿ ಇರುವಂತೆ ಮಾಡುತ್ತದೆ! ಪಾಪಿಗಳಾಗಿ, ನಾವು ಮರಣವನ್ನಷ್ಟೇ ಸಂಪಾದಿಸಿಕೊಳ್ಳುವದಕ್ಕೆ ಸಾಧ್ಯವಿತ್ತು (ರೋಮಾ 6:23). ಆದದರಿಂದ, ದುಷ್ಟ ಜನರಿಗೆ ಬರಲಿರುವ ದೈವಿಕ ಕೋಪಾಗ್ನಿಯ ಸನ್ನಿಧಿಯಲ್ಲಿ ನಿಂತುಕೊಂಡಿರುವ ವೇಳೆ, ನಾವು ಸತ್ಯಪೂರ್ವಕವಾಗಿ ಹೇಳುವದೆಲ್ಲಾ ಇಷ್ಟೇ, ಏನೆಂದರೆ "ನಾನು ದೇವರ ಕೃಪೆಯಿಂದಲೇ ಸಾಗುವೆನು ಹೊರತು ಮತ್ತೇನೂ ಅಲ್ಲ" ಎಂಬುದೆ. ಅಬ್ರಹಾಮನನ್ನು ಸೊದೋಮ ಮತ್ತು ಗೊಮೋರ ಪಟ್ಟಣಗಳ ಜನರಿಗೋಸ್ಕರ ವಿಜ್ಞಾಪನೆ ಪ್ರಾರ್ಥನೆ ಮಾಡುವಂತೆ ನಡಿಸಿದ್ದು ಈ ವಿಧವಾದ ಮನೋಭಾವವೇ ಎಂಬುದು ಸ್ಪಷ್ಟವಾಗುತ್ತದೆ.

ದುಷ್ಟರ ನಡುವೆ ಇರುವಂಥ ನೀತಿವಂತರಿಗಾಗುವ ಗತಿಯ ಕುರಿತಾಗಿ ಅಬ್ರಹಾಮನಿಗಿದ್ದ ಕಾಳಜಿಯು ಬೈಬಲಿನುದ್ದಕ್ಕೂ ಇರುವ ದೇವರ ಶ್ರೇಷ್ಠ ವ್ಯಕ್ತಿಗಳಿಗೆ ಒಂದು ವಿಜ್ಞಾಪನೆ ಮಾದರಿಯನ್ನು ತೋರಿಸಿ ಕೊಟ್ಟಿತ್ತು. ಹಳೆಯ ಒಡಂಬಡಿಕೆಯಲ್ಲಿ ಸರ್ವೋಚ್ಛ ಉದಾಹರಣೆಯಾಗಿರುವ ಮೋಶೆಯು ಕಾಲದಿಂದ ಕಾಲಕ್ಕೆ ಇಸ್ರಾಯೇಲ್ಯರ ಪರವಾಗಿ ವಿಜ್ಞಾಪನೆಯನ್ನು ಮಾಡಿದನು. ಯೆಹೋಶುವನು ಈ ಆಚಾರವನ್ನು ಮುಂದುವರೆಸಿದನು, ಅದೇ ರೀತಿಯಲ್ಲಿ ಸಮುವೇಲ, ದಾವೀದ, ಸೊಲೊಮೋನ, ಮತ್ತು ಎಲೀಯ, ಯೆಶಾಯ, ಯೆರೆಮೀಯ ಹಾಗೂ ಯೆಎಹೆಜ್ಕೇಲರಂಥ ಪ್ರವಾದಿಗಳು ಸಹ ಮಾಡಿದರು.

ಹೊಸ ಒಡಂಬಡಿಕೆಯಲ್ಲಿ, ಪರ್ವತದ ಮೇಲಿನ ಪ್ರಸಂಗದಲ್ಲಿ ಯೇಸುವು ಹಿಂಸೆ ಪಡಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ ಎಂದು ಆಜ್ಞಾಪಿಸಿದನು (ಮತ್ತಾಯ 5:44). ಆತನು ದಿಕ್ಕುಕಾಣದ ಮತ್ತು ಮನಗುಂದಿದ ಜನಸಮೂಹಗಳ ಬಗ್ಗೆ ಯೋಚಿಸಿದಾಗ, "ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" ಎಂದು ತನ್ನ ಶಿಷ್ಯರಿಗೆ ಹೇಳಿದನು (ಮತ್ತಾಯ 9:36-38). ಶಿಲುಬೆಯ ನೆರಳಿನಲ್ಲಿರುವ ವೇಳೆ, ಆತನು ಪೇತ್ರನ ನಂಬಿಕೆಯು "ಕುಂದಿಹೋಗಬಾರದೆಂದು" ಪ್ರಾರ್ಥನೆ ಮಾಡಿದ್ದನು (ಲೂಕ 22:31, 32). ಆತನು ಮಾಡಿದ ಶ್ರೇಷ್ಠವಾದ ಮಹಾ ಯಾಜಕತ್ವದ ಪ್ರಾರ್ಥನೆಯು ಏನಾಗಿತ್ತೆಂದರೆ ದೇವರು ತನ್ನ ಶಿಷ್ಯರನ್ನು ಕೆಡುಕನಿಂದ ತಪ್ಪಿಸಿ ಕಾಪಾಡಲಿ, ಅವರನ್ನು ಸತ್ಯದಲ್ಲಿ ಪರಿಶುದ್ಧಗೊಳಿಸಲಿ, ಮತ್ತು ಐಕ್ಯತೆ ಕೊಟ್ಟು, ಅವರ ಸಾಕ್ಷಿಯಿಂದಾಗಿ ತನ್ನನ್ನು ನಂಬುವದಕ್ಕಿದ್ದವರೆಲ್ಲರನ್ನು ಸಹ ಅವರೊಂದಿಗೆ ಆಶೀರ್ವದಿಸಬೇಕು ಎಂದಾಗಿತ್ತು (ಯೋಹಾನ 17:9-24).

ಅಪೊಸ್ತಲರು ಮತ್ತು ಆದಿ ಸಭೆಯು ತಮ್ಮ ಪ್ರಾರ್ಥನೆಗಳಲ್ಲಿ ಯೇಸುವಿನ ಮಾದರಿಯನ್ನು ಅನುಸರಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 1:14; 2:42; 4:23-31; 12:5-12; 13:1-3), ಆತನು "ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ" ಎಂದು ಬಲ್ಲವರಾಗಿದ್ದರು (ಇಬ್ರಿಯ 7:25). ಕ್ರೈಸ್ತೀಯ ಪ್ರಾರ್ಥನೆಗಳಲ್ಲಿ ಪವಿತ್ರಾತ್ಮನು ಸಹಾಯ ಮಾಡುವಿಕೆ ಮತ್ತು ವಿಜ್ಞಾಪನೆ ಮಾಡುವಿಕೆಯ ಕುರಿತು ಸಹ ಪ್ರಸ್ತಾಪಿಸುತ್ತಾನೆ (ರೋಮಾ 8:26-28). ಆತನ ಪತ್ರಿಕೆಗಳಲ್ಲಿ ಮೆಡಿಟೆರ್ರೇನಿಯನ್ ಜಗತ್ತಿನುದ್ದಕ್ಕೂ ಇರುವ ದೇವರ

ಜನರಿಗೋಸ್ಕರ ಮಾಡಲ್ಪಟ್ಟ ಹೃದಯಸ್ಪರ್ಶಿ ಹಾಗೂ ಶಕ್ತಿಶಾಲಿಯಾಗಿರುವ ಪ್ರಾರ್ಥನೆಗಳು ತುಂಬಿರುತ್ತವೆ. ಅಪೊಸ್ತಲನು ಅನೇಕ ಸಾರಿ, ತನಗೆ ವೈಯಕ್ತಿಕವಾಗಿ ಪರಿಚಯವಿಲ್ಲದ ಸಹೋದರರಿಗೋಸ್ಕರ ಸಹ ಪ್ರಾರ್ಥಿಸುತ್ತಿದ್ದನು (ಎಫೆಸ 1:15-23; 3:2, 14-21). ಅದರ ಜೊತೆಗೆ, ಆತನು ಕ್ರೈಸ್ತರನ್ನು "ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ … ಪ್ರಾರ್ಥನೆ" ಮಾಡಬೇಕೆಂದು ಬೇಡಿಕೊಂಡನು, ಮತ್ತು ತಾನು "ಪೂರ್ವಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು" ದೇವರನ್ನು ಬೇಡಿಕೊಳ್ಳಿರಿ ಎಂದು ಅವರ ಪ್ರಾರ್ಥನೆಗಳನ್ನು ಆಶಿಸಿದನು (ಎಫೆಸ 6:18, 19). ಪೌಲನು ಪರಾರ್ಥ ವಿಜ್ಞಾಪನೆಗಳಲ್ಲಿ ಅಷ್ಟೊಂದು ಮೌಲ್ಯವನ್ನು ಕಂಡಿದ್ದರಿಂದಲೇ "ನಮಗೆ ಸುಖಸಮಾಧಾನಗಳು ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು" ಎಂದು ಕ್ರೈಸ್ತರನ್ನು ಪ್ರಬೋಧಿಸಿದನು (1 ತಿಮೊಥೆ 2:2).

---

ಅಡಿಟಿಪ್ಪಣಿಗಳು

[1]John H. Walton, Victor H. Matthews, and Mark W. Chavalas, *The IVP Bible Background Commentary: Old Testament* (Downers Grove, Ill.: InterVarsity Press, 2000), 50. [2]Edwin Yamauchi, "ה֫וֹן," in *TWOT*, 1:268. [3]ಸಮಾರ್ಯದ ಸ್ತ್ರೀಯು ಸಹ, ತನಗೆ "ಜೀವಕರವಾದ ನೀರು" ಕೊಡುವೆನೆಂದು ಹೇಳಿದ ಯೇಸುವನ್ನು "ಕರ್ತನೇ" (κύριος, *ಕುರಿಯೊಸ*) ಎಂದು ಕರೆದಳು, ಅದರ ಅರ್ಥವು "ಅಯ್ಯಾ" (NASB; KJV; NIV; NRSV) ಎಂದಾಗಿರುತ್ತದೆ (ಯೋಹಾನ 4:10, 11). [4]ಪ್ರಾಚೀನ ಇಬ್ರಿಯ ಅಳತೆಗಳಿಗೆ ಸಮಾನವಾದ ಆಧುನಿಕ ಅಳತೆಗಳನ್ನು ನಿರ್ಧರಿಸುವುದು ಕಷ್ಟಕರವಾಗಿರುತ್ತದೆ. "ಸಿಯ" ದ ಚರ್ಚೆಯೊಂದಕ್ಕಾಗಿ, ನೋಡಿರಿ Roland de Vaux, *Ancient Israel*, vol. 1, *Social Institutions* (New York: McGraw-Hill Book Co., 1965), 201–3; and Edward M. Cook, "Weights and Measures," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:1050–51. [5]John E. Hartley, *Genesis*, New International Biblical Commentary (Peabody, Mass.: Hendrickson Publishers, 2000), 178. [6]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 312. [7]Martin J. Mulder, "Sodom and Gomorrah," in *The Anchor Bible Dictionary*, ed. David Noel Freedman (New York: Doubleday, 1992), 6:99–103. [8]ನೋಡಿರಿ *The Confession of Faith of the Presbyterian Church in the United States* (Richmond, Va.: John Knox Press, 1952), 25–30. *Westminster Confession of Faith*ನಿಂದ ತೆಗೆದುಕೊಳ್ಳಲಾಗಿರುವ ಈ ಬೋಧನೆಯನ್ನು ಈಗಲೂ ವಿಶ್ವದಾದ್ಯಂತ ಇರುವ "ಸುಧಾರಿತ ಸಭೆಗಳ" ಸದಸ್ಯರು ಅನುಸರಿಸುತ್ತಿದ್ದಾರೆ. [9]John N. Oswaltನು ಹೀಗೆ ಹೇಳಿದನು, "ದೇವರು ಒಂದು ನಿರ್ದಿಷ್ಟವಾದ ಕೆಲಸಕ್ಕಾಗಿ ಕೆಲವರನ್ನು ಜಾಗರೂಕತೆಯಿಂದ ಆಯ್ಕೆ ಮಾಡಿಕೊಳ್ಳುವನಾದ್ದರಿಂದ, ಅವರು ಉದ್ದೇಶವನ್ನು ಬಿಟ್ಟು ಬೇರೆ ದಾರಿ ಹಿಡಿದರೆ ಆತನು ಅವರನ್ನು ತಿರಸ್ಕರಿಸಲು ಸಹ ಸಾಧ್ಯವಿರುತ್ತದೆ (1 ಸಮುವೇಲ 2:27ff.)" (John N. Oswalt, "בָּחַר," in *TWOT*, 1:100). [10]Victor P. Hamilton, *The Book of Genesis: Chapters 18–50*, The New International Commentary on the Old Testament (Grand Rapids, Mich.: Wm. B. Eerdmans Publishing Co., 1995), 23.

[11]John T. Willis, *Genesis*, The Living Word Commentary (Austin, Tex.: Sweet Publishing Co., 1979), 261–62.